MR. SPEAKER: -- As per the agenda it has come in the form Call Attention Motion.

SRI C. M. ARMUGHAM: - Sir, you have got ample power to convert the Call Attention Motion into two-and-half hour discussion.

MR. SPEAKER: — Then the hon. member will please send a separate notice. I will consider that.

(ii) *re: non availability of kerosene and steps to meet the shortages*

ಶ್ರೀ ಟಿ. ಆರ್. ಶಾಮಣ್ಣ (ಬಸವನಗುಡಿ):— ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಸೀಮೆಎಣ್ಣೆ ಕೊರತೆಯಿಂದ ಜನಗಳಿಗೆ ಆಗಿರತಕ್ಕ ತೊಂದರೆಯ ಬಗ್ಗೆ ಆಹಾರ ಮತ್ತು ಸರಬರಾಜು ಸಚಿವರ ಗಮನ ಸಳೆಯುತ್ತೇನೆ.

ಶ್ರೀ ಜಿ. ರಾಮೇಗೌಡ (ಆಹಾರ ಮತ್ತು ಸರಬರಾಜು ಸಚಿವರು) :— ಸ್ವಾಮಿ ನನ್ನ ಹೇಳಿಕೆ ಈ ರೀತಿ ಇದೆ :—

ಮಾನ್ಯ ಸಭಾಧ್ಯಕ್ಷರೇ,

ಇತರ ರಾಷ್ಟ್ರಗಳಿಂದ ಬರುವ ಕಚ್ಚಾತೈಲ ಸರಬರಾಜಿನಲ್ಲಿ ಕೊರತೆಯುಂಟಾದುದರಿಂದ ಭಾರತ ಸರ್ಕಾರದವರು ಪ್ರತಿಯೊಂದು ರಾಜ್ಯದಲ್ಲಿ ಸೀಮೆಎಣ್ಣೆ ಸರಬರಾಜಿನ ಮೇಲೆ ಕೆಲವೊಂದು ನಿಬಂಧನೆಗಳನ್ನ ವಿಧಿಸಿದ್ದಾರೆ. ೧೯೭೮ರ ಡಿಸೆಂಬರ್ ತಿಂಗಳ ಕೊನೆಯವರೆಗೆ ಕರ್ನಾಟಕ ರಾಜ್ಯಕ್ಕೆ ಆಗುತ್ತಿದ್ದ ಸೀಮೆಎಣ್ಣೆ ಸರಬರಾಜು ಸಾಕಷ್ಟು ಮಟ್ಟಿಗೆ ತೃಪ್ತಿಕರವಾಗಿಯೇ ಇದ್ದಿತು. ಹಾಗಿದ್ದರೂ ಈ ನಿಬಂಧನೆಗಳ ಪರಿಣಾಮವಾಗಿ ಕೆಲಮಟ್ಟಿನ ಕೊರತೆಯನ್ನು ಎದುರಿಸಬೇಕಾಗುತ್ತದೆ. ಈ ನಿಯಮಿತ ಸರಬರಾಜು ಹಾಗೂ ಬಳಕೆದಾರರು ಹೆಚ್ಚು ಹೆಚ್ಚು ಕೊಳ್ಳುವುದೂ ಸೇರಿ ಈಗಿರುವ ಅಭಾವವನ್ನು ಮತ್ತಷ್ಟು ಹೆಚ್ಚಿಸಿದೆ. ಇದರ ಜೊತೆಗೆ ಮದರಾಸು ತೈಲ ಶುದ್ಧೀಕರಣ ಕೇಂದ್ರವು ಶೇಕಡ ೭೦ರಷ್ಟು ಸಾಮರ್ಥ್ಯದಿಂದ ಕೆಲಸ ನಿರ್ವಹಿಸುತ್ತಿರುವುದು ಹಾಗೂ ೧೯೭೯ರ ಮಾರ್ಚ್ ತಿಂಗಳ ಮೊದಲ ಭಾಗದಲ್ಲಿ ಸೀಮೆಎಣ್ಣೆಯನ್ನು ಮದರಾಸಿನಿಂದ ಬೆಂಗಳೂರಿಗೆ ರವಾನಿಸಲು ಎಣ್ಣೆ ವ್ಯಾಗನ್‌ಗಳು ದೊರೆಯದಿದ್ದ ಸಮಸ್ಯೆಯೂ ಸೇರಿ ಕೊರತೆಯನ್ನು ಇನ್ನಷ್ಟು ಹೆಚ್ಚಿಸಿದೆ. ೧೯೭೯ರ ಜನವರಿ ಮತ್ತು ಫೆಬ್ರವರಿ ತಿಂಗಳಿನಲ್ಲಿ ಹಂಚಿಕೆಯಾಗಿದ್ದ ೧೮,೩೪೦ ಎಂ.ಟಿ ಹಾಗೂ ೧೭,೫೪೨ ಎಂ.ಟಿ. ಗಳಿಗೆ ಬದಲಾಗಿ ಕರ್ನಾಟಕ ರಾಜ್ಯವು ಕ್ರಮವಾಗಿ ೧೯,೩೪೦ ಎಂ.ಟಿ. ಹಾಗೂ ೧೭,೬೯೦ ಎಂ. ಟಿ. ಗಳಷ್ಟು ಸೀಮೆಎಣ್ಣೆ ಪಡೆಯಿತು. ೧೯೭೯ರ ಮಾರ್ಚ್ ತಿಂಗಳ ಅವಶ್ಯಕ ಬೇಡಿಕೆಯಾಗಿದ್ದ ೧೮,೨೨೭ ಎಂ. ಟಿ.ಗಳ ಬದಲಾಗಿ ೬,೭೫೫ ಎಂ.ಟಿ.ಗಳಷ್ಟು ಹಂಚಿಕೆಯಾಗಿದ್ದು ಇದು ಭಾರತ ಸರ್ಕಾರದ ನಿರ್ದೇಶನದ ಪ್ರಕಾರ ಕಳೆದ ವರ್ಷದ ತತ್ಸಮಾನ ತಿಂಗಳಿನಲ್ಲಿ ಆಗಿದ್ದ ವಾಸ್ತವಿಕ ಬಳಕೆಗಿಂತಲೂ ಶೇಕಡ ೮೦ಷ್ಟು ಹೆಚ್ಚಾಗಿದೆ. ಆದರೂ ಸಹ ಪ್ರಾಮಾಣಿಕ ಬಳಕೆದಾರರ ಬೇಡಿಕೆಯನ್ನು ಪೂರೈಸಲು ಈ ಪ್ರಮಾಣದ ಸರಬರಾಜು ಸಾಕಷ್ಟಾಗುತ್ತದೆ. (ವಿಫಲತೆಗೆ ಕಾರಣಗಳಿದ್ದ ಹೊರತು ಸಾಮಾನ್ಯವಾಗಿ ಉತ್ಪಾದನೆ ಹಾಗೂ ಸರಬರಾಜು ಒಂದೇ ರೀತಿಯಿರುವುದನ್ನು ಸಹ ಇಲ್ಲಿ ಗಮನಿಸಬಹುದಾಗಿದೆ) ಆದರೆ ಸಾರ್ವಜನಿಕರು ತಮ್ಮ ಸಂಬಳ ಸಾರಿಗೆ ಪಡೆದ ದಿನಾಂಕಗಳಿಗೆ ಅನುಗುಣವಾಗಿ ಒಂದೇ ತಿಂಗಳಿನಲ್ಲಿ ವಾರದಿಂದ ವಾರಕ್ಕೆ ಬಳಕೆದಾರರ ಬಳಕೆಯ ರೀತಿಯೂ ಬದಲಾಗುತ್ತಿರುತ್ತದೆ. ಹೀಗಾಗಿ ಮೊದಲ ವಾರದಲ್ಲಿಯೇ ಸರಬರಾಜು ಕೊರತೆಯುಂಟಾದಲ್ಲಿ ಅದರಿಂದ ಅಭಾವವುಂಟಾಗಬಹುದೆಂಬ ಭಯದ ಜೊತೆಗೆ ಕೆಲವೊಮ್ಮೆ ಬಿಗಡಾಯಿಸುವ ಪ್ರಸಂಗ ಉಂಟಾಗುತ್ತದೆ. ಈ ಸಂಗತಿಯನ್ನು ಫೆಬ್ರವರಿ ತಿಂಗಳಿನಲ್ಲಿ ಸಹ ಗಮನಿಸಲಾಯಿತು. ಆ ತಿಂಗಳ ಮೊದಲ ಎರಡು ವಾರಗಳಲ್ಲಿ ಕೊರತೆ ಕಂಡುಬಂದಿದ್ದು, ನಂತರದ ಎರಡು ವಾರಗಳಲ್ಲಿ ಪರಿಸ್ಥಿತಿ ಉತ್ತಮಗೊಂಡಿತು.

ಬೆಂಗಳೂರಿನಲ್ಲಿರುವ ಎಲ್ಲಾ ಪ್ರಾಮಾಣಿಕ ಬಳಕೆದಾರರಿಗೂ ಸೀಮೆಎಣ್ಣೆ ಸರಬರಾಜು ಆಗುವಂತೆ ನೋಡಿಕೊಳ್ಳುವ ಸಲುವಾಗಿ ಪ್ರತಿಯೊಬ್ಬ ರೇಷನ್ ಕಾರ್ಡ್‌ದಾರನಿಗೂ ಪ್ರತಿ ವಾರದಲ್ಲಿಯೂ ಪರಿಮಿತ ಪ್ರಮಾಣದಲ್ಲಿ ಸೀಮೆಎಣ್ಣೆಯನ್ನು ಸರಬರಾಜು ಮಾಡುವಂತೆ ಆದೇಶಗಳನ್ನು ನೀಡಲಾಗಿದೆ.

ಯಾವ ಕೊಳಚೆ ಪ್ರದೇಶಗಳಲ್ಲಿ ರೇಷನ್‌ಕಾರ್ಡ್‌ಗಳನ್ನು ಕೊಟ್ಟಿಲ್ಲವೋ ಅಂಥವರಿಗೆ ಸಂಚಾರಿ ೧೫ ವಿಪಸಗಳಲ್ಲಿ ಕಾರ್ಡುಗಳನ್ನು ವಿತರಣೆ ಮಾಡುವ ವ್ಯವಸ್ಥೆ ಮಾಡಲಾಗುತ್ತದೆ. ಈ ಮಧ್ಯೆ ಇಂತಹ

ಪ್ರದೇಶಗಳಲ್ಲಿ ನಾಗರಿಕ ಸರಬರಾಯಿ ಇಲಾಖೆಯು ಇನ್ಸ್‌ಪೆಕ್ಟರ್‌ರವರ ಮೇಲ್ವಿಚಾರಣೆಯಲ್ಲಿ ಚಿಲ್ಲರೆ ವ್ಯಾಪಾರಿಗಳ ಮೂಲಕ (ಹಾಕರ್ಸ್) ಸೀಮೆಎಣ್ಣೆಯನ್ನು ಹಂಚುವ ವ್ಯವಸ್ಥೆ ಮಾಡಲಾಗುತ್ತದೆ.

ಈ ಪರಿಮಿತ ಪ್ರಮಾಣವನ್ನು ಸದ್ಯ ತಾತ್ಕಾಲಿಕವಾಗಿ ಪ್ರತಿ ವಾರಕ್ಕೆ ಒಂದು ಕಾರ್ಡಿಗೆ ಎರಡು ಲೀಟರುಗಳನ್ನು ನಿಗದಿಪಡಿಸಲಾಗಿದೆ, ಮತ್ತು ಮುಂದೆ ಸರಬರಾಜಿನ ಸ್ಥಿತಿಯನ್ನು ನೋಡಿಕೊಂಡು ಕ್ರಮೇಣ ಈ ಪ್ರಮಾಣವನ್ನು ಹೆಚ್ಚಿಸಲಾಗುತ್ತದೆ. ಬಳಕೆದಾರರಿಗೆ ಸೀಮೆಎಣ್ಣೆ ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಗಳಲ್ಲಿ/ನಿರ್ದಿಷ್ಟ ಚಿಲ್ಲರೆ ವ್ಯಾಪಾರಿಗಳ ಅಂಗಡಿಗಳಲ್ಲಿ ಮತ್ತು ನ್ಯಾಯಬೆಲೆ ಅಂಗಡಿಗಳು ಸೀಮೆಎಣ್ಣೆಯನ್ನು ಮಾರಾಟ ಮಾಡದಿದ್ದಲ್ಲಿ ಆ ಅಂಗಡಿಗಳ ಬಳಿ ಇರುವ ಚಿಲ್ಲರೆ ವ್ಯಾಪಾರಿಗಳ(ಹಾಕರ್ಸ್) ಮೂಲಕ ದೊರೆಯುವಂತೆ ಮಾಡಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲೂ ಸಹ ಅನಿವಾರ್ಯ ಇದ್ದಲ್ಲಿ, ಇಂಥದೇ ವ್ಯವಸ್ಥೆಯನ್ನು ಮಾಡಲು ಸೂಚನೆಗಳನ್ನು ಕೊಡಲಾಗಿದೆ.

ಸೀಮೆಎಣ್ಣೆ ವ್ಯಾಪಾರವನ್ನು ರೇಷನ್ ಕಾರ್ಡುಗಳಿಗೆ ಸೀಮಿತಗೊಳಿಸುವ ಮೂಲಕ ಪ್ರಾಮಾಣಿಕ ಬಳಕೆದಾರರಿಗೆ ನಿಯಮಿತವಾಗಿ ಸರಬರಾಜು ಆಗುವಂತೆ ನೋಡಿಕೊಳ್ಳಲು ಅಗತ್ಯವಾದ ಕ್ರಮವನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳನ್ನೂ ಸಹ ಕೋರಲಾಗಿದೆ.

ದಿನಾಂಕ ೭ನೇ ಫೆಬ್ರುವರಿ ೧೯೭೯ರಂದು ಭಾರತ ಸರ್ಕಾರದ ಪೆಟ್ರೋಲಿಯಂ ಮತ್ತು ರಾಸಾಯನಿಕ ಇಲಾಖೆಯ ಮಾನ್ಯ ಮಂತ್ರಿಗಳಿಗೆ ಪತ್ರ ಬರೆದು ೨೨,೦೦೦ ಎಂ.ಟಿ. ಗಳಷ್ಟು ಸೀಮೆಎಣ್ಣೆಯನ್ನು ಸರಬರಾಜು ಮಾಡಲು ಏರ್ಪಾಡು ಮಾಡಬೇಕೆಂದು ಕೋರಿದ್ದೆ. ಇದಕ್ಕೆ ಪ್ರತಿಯಾಗಿ, ಮಾನ್ಯ ಕೇಂದ್ರದ ಪೆಟ್ರೋಲಿಯಂ ಮಂತ್ರಿಗಳು ಸೀಮೆಎಣ್ಣೆ ಕೋಟಾವನ್ನು ಹೆಚ್ಚುಪರಿಸಲು ತಕ್ಷಣಕ್ಕೆ ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಆದರೂ ನಿಮ್ಮ ಕೋರಿಕೆಯನ್ನು ಗಮನದಲ್ಲಿ ಇಟ್ಟುಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.

ಈ ಪರಿಸ್ಥಿತಿಯ ಉಪಯೋಗ ಪಡೆದು ಸೀಮೆಎಣ್ಣೆಯನ್ನು ಹೆಚ್ಚಿನ ಬೆಲೆಗೆ ಮತ್ತು ಕದಿಮೆ ಆಳತೆಯಲ್ಲಿ ಮಾರಾಟ ಮಾಡಲು ಪ್ರಯತ್ನಿಸಿದ ಸೀಮೆಎಣ್ಣೆ ಚಿಲ್ಲರೆ ಮಾರಾಟಗಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಏರ್ಪಾಟು ಮಾಡಲಾಗಿದೆ ಇದಲ್ಲದೆ ಸೀಮೆಎಣ್ಣೆಯ ಅಕ್ರಮ ದಾಸ್ತಾನು ಮಾಡುವುದನ್ನು ಮತ್ತು ಕಾಳಸಂತೆ ವ್ಯಾಪಾರವನ್ನು ತಡೆಗಟ್ಟಲು, ಜಿಲ್ಲಾಧಿಕಾರಿಗಳೇ ಮೊದಲುಗೊಂಡು ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೂ ಕಾನೂನಿನ ಚೌಕಟ್ಟಿನಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸೂಕ್ತ ಸೂಚನೆಗಳನ್ನು ಕೊಡಲಾಗಿದೆ.

ಕಳೆದ ಸಾಲಿನಲ್ಲಿ ಪ್ರತಿ ತಿಂಗಳೂ ಎಷ್ಟು ಪ್ರಮಾಣದ ಸೀಮೆ ಎಣ್ಣೆಯನ್ನು ಪಡೆಯುತ್ತಿದ್ದೆವೋ ಆಷ್ಟೇ ಪ್ರಮಾಣದಲ್ಲಿ ಸೀಮೆ ಎಣ್ಣೆಯನ್ನು ಈ ಸಾಲಿನಲ್ಲಿಯೂ ಪಡೆಯುತ್ತಿದ್ದಾಗ್ಯೂ ಭಾರತ ಸರ್ಕಾರವರು ನಿಗದಿ (ಅಲೊಕೇಷನ್) ಮಾಡಿದ್ದ ಪ್ರಮಾಣವನ್ನು ಕರಾರುವಾಕ್ಕಾಗಿ ಗಣನೆಗೆ ತಗೆದುಕೊಳ್ಳದೆ ಕಳೆದ ಸಾಲಿನಲ್ಲಿ ಇಂಡಿಯನ್ ಆಯಿಲ್ ಕಂಪನಿಯವರು ಹೆಚ್ಚಿನ ಸೀಮೆ ಎಣ್ಣೆಯನ್ನು ಸರಬರಾಜು ಮಾಡುತ್ತಿದ್ದರು.

ಭಾರತ ಸರ್ಕಾರದಿಂದ ನಿಗದಿಯಾದ ಪ್ರಮಾಣದಲ್ಲಿ ಸೀಮೆ ಎಣ್ಣೆಯನ್ನು ಪಡೆಯುತ್ತಿದ್ದಾಗೂ ನಮ್ಮ ಬೇಡಿಕೆಗೆ ಅನುಗುಣವಾಗಿ ಕಚ್ಚಾ ಎಣ್ಣೆ ಸಾಕಾದಷ್ಟು ಸಮಾನವಾದ ಪ್ರಮಾಣದಲ್ಲಿ ಕೊಚ್ಚಿನ್ ಮತ್ತು ಮದ್ರಾಸ್ ತೈಲ ಶುದ್ದೀಕರಣ ಕೇಂದ್ರಗಳಿಗೆ ಸರಬರಾಜು ಆಗದಿರುವುದರಿಂದ, ಸುಮಾರು ಶೇಕಡ ೭೦ರಷ್ಟು ಪ್ರಮಾಣದ ಕೆಲಸವನ್ನು ಮಾತ್ರ ಮಾಡಲು ಸಾಧ್ಯವಾಗಿದೆ. ಇಂಡಿಯನ್ ಆಯಿಲ್ ಕಂಪನಿಯಲ್ಲಿ ದೊರೆಯುವ ದಾಸ್ತಾನು ವ್ಯವಸ್ಥೆಯನ್ನು ನೋಡಿದಾಗ ಅದು ಒಂದು ದಿವಸ ಹೆಚ್ಚಾಗಿಯೂ ಮತ್ತೊಂದು ದಿವಸ ಕಡಿಮೆಯಾಗಿಯೂ ಸೀಮೆ ಎಣ್ಣೆಯನ್ನು ಮಾರಾಟಕ್ಕೆ ಬಿಡುಗಡೆ ಮಾಡುವುದು ಕಂಡುಬರುತ್ತದೆ. ಇದರಿಂದಾಗಿ ಅಭಾವ ಉಂಟಾಗಿದೆ.

ಕಚ್ಚಾ ಎಣ್ಣೆಯಿಂದಾಗುವ ಉಪ ಉತ್ಪಾದನೆಗಳೆಂದರೆ ಪೆಟ್ರೋಲ್, ಡೀಸೆಲ್, ಸೀಮೆ ಎಣ್ಣೆ ಮತ್ತು ಅಡಿಗೆ ಅನಿಲ. ಇದರಿಂದಾಗಿ ಕಚ್ಚಾ ಎಣ್ಣೆಯ ಸರಬರಾಜು ಕಡಿಮೆಯಾದಾಗ ಮೇಲೆ ತಿಳಿಸಿದ ಉಪ ಉತ್ಪಾದನೆಗಳು ಕಡಿಮೆಯಾಗುವುದು ಸಹಜವೇ ಆಗಿದೆ. ಕಲ್ಲಿದ್ದಲಿನ ಅಭಾವದಿಂದಾಗಿ ಕುಲುಮೆ ಎಣ್ಣೆ ಹಾಗೂ ಅಡಿಗೆಯ ಅನಿಲದ ಬೇಡಿಕೆ ಹೆಚ್ಚಾಗುತ್ತದೆ. ಎಲ್ಲಿಯವರೆಗೆ ಕಚ್ಚಾ ಎಣ್ಣೆಯೂ ತೈಲ

ಶುದ್ಧೀಕರಣ ಕೇಂದ್ರಕ್ಕೆ ಸಾಕಾದಷ್ಟು ಪ್ರಮಾಣದಲ್ಲಿ ಸರಬರಾಜು ಆಗುವುದಿಲ್ಲವೊ ಅಲ್ಲಿಯವರೆಗೆ ಅದರ ಉಪ ಉತ್ಪನ್ನಗಳ ಉತ್ಪತ್ತಿಯಾಗಿ ನಮ್ಮ ಬೇಡಿಕೆಗಳು ಈಡೇರುವುದಿಲ್ಲ.

ರಾಜ್ಯ ಸರ್ಕಾರವು ರಾಜ್ಯದ ಅವಶ್ಯಕತೆಗೆ ೨೨,೦೦೦ ಎಂ.ಟಿ. ಸೀಮೆ ಎಣ್ಣೆಯನ್ನು ಹಂಚಲೇ ಬೇಕೆಂದು ಕೇಂದ್ರ ಸರ್ಕಾರಕ್ಕೆ ಆಗ್ರಹ ಪೂರಕವಾಗಿ ಒತ್ತಾಯ ಮಾಡಿದೆ. ಸೀಮೆ ಎಣ್ಣೆಯು ರಾಜ್ಯಕ್ಕೆ ಮದ್ರಾಸು, ಕೊಚ್ಚಿನ್ ಮತ್ತು ಗೋವಾದಿಂದ ಸರಬರಾಜು ಆಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ:—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳಾದ ರಾಮೇಗೌಡರು ಸಾಧ್ಯವಾದಷ್ಟು ತಾವೇ ಸ್ವತ: ಜವಾಬು ಕೊಡತಕ್ಕ ಸಾಮರ್ಥ್ಯವುಳ್ಳವರು. ಆದರೆ ಇವೊತ್ತು ಅಧಿಕಾರಿಗಳು ಬರೆದು ಕೊಟ್ಟಿರತಕ್ಕಂತಾದ್ದನ್ನು ಓದಿ ಇದರಲ್ಲಿ ಹೆಚ್ಚಿಗೆ ವಿಚಾರ ನಿಜಾಂಶಕ್ಕೆ ದೂರವಾಗಿರುವುದರಿಂದ ವ್ಯಥೆಪಡಬೇಕಾಗಿದೆ. ಮೊದಲನೆಯುದಾಗಿ ಅವರು ಕಳೆದ ಎರಡು ತಿಂಗಳಲ್ಲಿ ಅಂದರೆ ಜನವರಿ ಮತ್ತು ಫೆಬ್ರುವರಿ ತಿಂಗಳುಗಳಲ್ಲಿ ನಮಗೆ ಎಷ್ಟು ಸೀಮೆ ಎಣ್ಣೆ ಸರಬರಾಜು ಆಗಬೇಕಾಗಿತ್ತೋ ಅಷ್ಟೂ ಸರಬರಾಜು ಆಗಿದೆ ಎಂದು ಒಪ್ಪಿಕೊಂಡಿದ್ದಾರೆ. ಅಲ್ಲದೇ ಹೋದ ವರ್ಷಕ್ಕಿಂತಲೂ ಈ ವರ್ಷ ೮ ಪರಸೆಂಟ್ ಜಾಸ್ತಿ ಬಂದಿದೆ ಎಂದು ಕೂಡ ಒಪ್ಪಿಕೊಂಡಿದ್ದಾರೆ. ಆಗಿದ್ದರೂ ಕೂಡ ಈ ಸೀಮೆ ಎಣ್ಣೆ ಕೊರತೆ ಬಂದಿರುವುದಕ್ಕೆ ಸರಿಯಾದ ಕಾರಣ ಏನು ಸರಿಯಾಗಿ ಹಂಚಿಕೆ ಮಾಡುವುದರಲ್ಲಿ ಏನಾದರೂ ಅವ್ಯವಸ್ಥೆಯಾಗಿ ತೊಂದರೆಯಾಗಿದೆಯೇ? ಒಂದು ಕಾಲದಲ್ಲಿ ಆಟೋರಿಕ್ಷಾ ಓಡಿಸುವವರು ಪೆಟ್ರೋಲ್ ಬದಲಾಗಿ ಸೀಮೆ ಎಣ್ಣೆ ಹೆಚ್ಚು ಉಪಯೋಗಿಸುತ್ತಿದ್ದರು ಎಂದು ಕೆಲವರು ಹೇಳುತ್ತಿದ್ದರು. ಆ ರೀತಿ ಏನಾದರೂ ಆಗಿದೆಯೇ? ಇವೊತ್ತು ತಾವು ಒಂದು ರೇಷನ್ ಕಾರ್ಡಿಗೆ ಎರಡು ಲೀಟರ್ ಎಣ್ಣೆ ಕೊಡುತ್ತೇವೆಂದು ಹೇಳಿದರೆ ಎಷ್ಟೋ ಮನೆಗಳಲ್ಲಿ ಸೌದೆ ಇಟ್ಟುಕೊಂಡು, ಇದ್ದಿಲು ಇಟ್ಟುಕೊಂಡು ಅಡುಗೆ ಮಾಡಲಿಕ್ಕೆ ಸ್ಥಳಾವಕಾಶ ಇಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ನಮ್ಮ ಮನೆಯ ಎದುರಿನಲ್ಲಿಯೇ ಕೆರೋಸಿನ್ ಡಿಪೋ ಇರುವುದರಿಂದ ಹೊಗೀ ಬರುವವರ ಕೈಯಲ್ಲಿ ಪ್ರತಿನಿತ್ಯ ಬೈಗಳ ಕೇಳಬೇಕಾಗಿದೆ. ಇದನ್ನೆಲ್ಲಾ ನೋಡಿದರೆ ಈ ನ್ಯಾಚುರಲ್ ಕಾಸ್‌ಗಿಂತಲೂ ಮನುಷ್ಯರ ಕೈವಾಡವೇ ಇರಬೇಕು ಎಂದು ನನಗೆ ಅನಿಸುತ್ತದೆ. ಮಾನ್ಯ ಮಂತ್ರಿಗಳು ಅದಷ್ಟು ಬೇಗ ಜನತೆಗೆ ಆಗಿರತಕ್ಕಂತಹ ತೊಂದರೆಯನ್ನು ತಪ್ಪಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇವೊತ್ತು ಗ್ಯಾಸ್, ಎಲೆಕ್ಟ್ರಿಸಿಟಿ ಸ್ಟೌವ್ ಮೊದಲಾದ ಆಧುನಿಕ ಉಪಕರಣಗಳನ್ನು ಇಟ್ಟುಕೊಳ್ಳದೇ ಇರತಕ್ಕವರಿಗೆ ಸೀಮೆ ಎಣ್ಣೆಯೇ ಅವಶ್ಯಕ ವಸ್ತು ಆಗಿದೆ. ಅಲ್ಲದೇ ಗುಡಿಸಲುಗಳಲ್ಲಿ ವಾಸಿಸುವ ಜನರಿಗೂ ಕೂಡ ಈ ಸೀಮೆ ಎಣ್ಣೆ ಬಹಳ ಅವಶ್ಯಕತೆ ಇದೆ. ಆದುದರಿಂದ ಸಾಧ್ಯವಾದಷ್ಟು ಬೇಗ ಜನತೆಗೆ ಸಾಕಷ್ಟು ಸೀಮೆ ಎಣ್ಣೆ ಒದಗಿಸುವುದಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ. ಇದು ಆಗುವುದಿಲ್ಲ ಎಂದು ತಿಳಿಸಿದರೆ ಜನರು ಏನಾದರೂ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ. ಎರಡು ಲೀಟರ್ ಕೊಡುತ್ತೇವೆಂದು ಹೇಳಿದರೆ ಸರಿಯಲ್ಲ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಸರಿಯಾದ ಭರವಸೆಯನ್ನು ಕೊಡಬೇಕೆಂದು ನಾನು ಈ ಸಭೆಯ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರತಕ್ಕಂತಹ ಹೇಳಿಕೆಯನ್ನು ನೋಡಿದಾಗ ಅವರು ಭಾರತ ಸರ್ಕಾರ ಹಾಗೂ ಬಳಕೆದಾರರ ಹಾಗೂ ಮದ್ರಾಸ್ ತೈಲ ಶುದ್ಧೀಕರಣ ಮುಂತಾದವರ ಮೇಲೆ ದೋಷಾರೋಪಣೆ ಮಾಡಿದ್ದಾರೆಯೇ ಹೊರತು ರಾಜ್ಯ ಸರ್ಕಾರ ಎಲ್ಲಿ ವಿಫಲತೆ ಹೊಂದಿದೆ ಎಂದು ಹೇಳಲಿಲ್ಲ. ಬಳಕೆದಾರರ ಮೇಲೆ ಏನು ಹೇಳಿದ್ದಾರೆ ಅದನ್ನು ಪೂರ್ತಿ ಪ್ರತಿಭಟನೆ ಮಾಡಬೇಕಾಗಿದೆ. ಬಳಕೆದಾರರು ಬಹಳ ಹೆಚ್ಚು ತೆಗೆದುಕೊಂಡು ಹೋಗಿ ಮುಚ್ಚಿಟ್ಟುಕೊಳ್ಳುತ್ತಿದ್ದಾರೆ ಎಂದು ಹೇಳಿದ್ದಾರೆ. ನಮ್ಮ ಮನೆಯಲ್ಲಿ ಇರುವವನು ಒಬ್ಬನೇ, ನಮ್ಮಲ್ಲಿ ಒಂದು ಸ್ಟವ್ ಇದೆ. ಒಂದು ವಾರದಿಂದ ಪ್ರಯತ್ನಪಟ್ಟಿದ್ದೇನೆ. ಒಂದು ಬುಡ್ಡಿ ಸೀಮೆ ಎಣ್ಣೆ ಸಿಕ್ಕಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಒಂದು ಬುಡ್ಡಿಯಷ್ಟಾದರೂ ಸೀಮೆ ಎಣ್ಣೆಯನ್ನಾದರೂ ಕಳುಹಿಸಿಕೊಡಬೇಕು.

(ಮಾನ್ಯ ಸದಸ್ಯರು ಖಾಲಿ ಸೀಮೆ ಎಣ್ಣೆ ಬಾಟಲನ್ನು ಸಭಾಧ್ಯಕ್ಷರ ಕಡೆಗೆ ಕಳುಹಿಸಿಕೊಟ್ಟರು)

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಸದಸ್ಯರು ಬೇರೆ ಯಾವುದೋ ಬಾಟಲ್ ತೆಗೆದುಕೊಂಡು ಬಂದಿರುವಂತೆ ಕಾಣುತ್ತದೆ.

**ಅಧ್ಯಕ್ಷರು.**—ಮಾನ್ಯ ಸದಸ್ಯರು ಬಾಯಿ ಮಾತಿನಲ್ಲಿಯೇ ಹೇಳಬಹುದಿತ್ತು. ಬಾಟಲ್ ಏತಕ್ಕೆ ತೆಗೆದುಕೊಂಡು ಬಂದಿರಿ?

ಶ್ರೀ ಪಿ. ರಾಂದೇವ್.--ಅಧ್ಯಕ್ಷರೆ, ಶ್ರೀರಾಂಪುರದ ಸ್ಮಶಾನಕ್ಕೆ ಬೆಳಿಗ್ಗೆ ನಮ್ಮ ಕಾರ್ಪೊರೇಷನ್ ಕಮಿಷನರ್, ಇಂಜಿನಿಯರ್, ಹೆಲ್ತ್ ಆಫೀಸರ್ ಅವರನ್ನು ಹೋಗಿ ನೋಡಿಕೊಂಡು ಬಂದಿದ್ದಾರೆ ನನ್ನ ಜೊತೆಯಲ್ಲಿ ಅಲ್ಲಿ ಹೆಣ ಸುಟ್ಟಿರತಕ್ಕಂತಾದ್ದನ್ನು ನೋಡಿದರೆ ಒಂದು ಕಡೆ ಬಹಳ ಭಯಂಕರ ಅರ್ಧ ಸುಟ್ಟಿರುವ ಕೈ ಮತ್ತೊಂದು ಕಡೆ ತಲೆಬುರುಡೆ ಸುಟ್ಟಿಲ್ಲದಿರುವುದು ಇನ್ನೊಂದು ಕಡೆ ಅರ್ಧ ಬೆಂದ ಶವವನ್ನು ಹೂತಿಟ್ಟಿದ್ದಾರೆ. ಸತ್ತವರ ಬಗ್ಗೆ ಗೌರವ ಕೊಡುವುದಕ್ಕೂ ಸಾಧ್ಯವಿಲ್ಲವೇ? ಅಲ್ಲಿಯಾದರೂ ಸೀಮೆ ಎಣ್ಣೆ ಇಡಲಿಕ್ಕೆ ಸಾಧ್ಯವಿಲ್ಲವೆ? ಇದಕ್ಕೆ ಪೂರ್ತಿ ಹೊಣೆ ರಾಜ್ಯ ಸರ್ಕಾರ ಎಂದು ಹೇಳಬೇಕಾಗಿದೆ. ಇದರ ಜೊತೆಗೆ ಸೀಮೆ ಎಣ್ಣೆ ಬ್ಲಾಕ್ ಮಾರ್ಕೆಟ್ಟಿನಲ್ಲಿ ಹೊರ ರಾಜ್ಯಗಳಿಗೆ ಹೋಗುತ್ತಿದೆ. ಇವೊತ್ತು ಒಂದು ರೂಪಾಯಿ, ಎರಡು ರೂಪಾಯಿ ಜಾಸ್ತಿ ಕೊಟ್ಟರೆ ಐದು ಲೀಟರ್‌ವರೆಗೆ ಸೀಮೆ ಎಣ್ಣೆ ಬ್ಲಾಕ್‌ನಲ್ಲಿ ಸಿಕ್ಕುತ್ತದೆ. ಇದು ಸರ್ಕಾರಕ್ಕೂ ಕೂಡ ಗೊತ್ತಿದೆ ಆದರೆ ಇದನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ. ಅಲ್ಲದೇ ಸಮರ್ಪಕವಾದ ರೀತಿಯಲ್ಲಿ ವಿತರಣೆ ಮಾಡುವ ವಿಚಾರದಲ್ಲೂ ಸರ್ಕಾರ ಪೂರ್ತಿ ವಿಫಲಗೊಂಡಿದೆ ಎಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳ ಹೇಳಿಕೆ ಪ್ರಕಾರ ಸೀಮೆ ಎಣ್ಣೆ ಕೋಟಾ ಕಡಿಮೆ ಬಂದಿಲ್ಲ. ಸಮರ್ಪಕವಾದ ರೀತಿಯಲ್ಲಿ ವಿತರಣೆ ಮಾಡಬೇಕು. ಇಲ್ಲದೆ ಇದ್ದರೆ ಬೇರೆ ಯಾವುದಾದರೂ ಇಂಧನವನ್ನು ಕೊಡಿ. ಯಾವುದಾದರೂ ಇಂಧನ ಕೊಟ್ಟು ಈಗ ಬಂದಿರತಕ್ಕ ಕೊರತೆಯನ್ನು ಹೋಗಲಾಡಿಸಬೇಕೆಂದು ನಾನು ಮಾನ್ಯ ಮಂತ್ರಿಗಳನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.--ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಾದ ರಾಮೇಗೌಡರು ಕನ್ನಡದಲ್ಲಿ ಉತ್ತರ ಕೊಟ್ಟಿರುವ ಬಗ್ಗೆ ಅವರನ್ನು ಅಭಿನಂದಿಸುತ್ತೇನೆ, ಆದರೆ ಕನ್ನಡಿಗರಿಗೆ ಸೀಮೆ ಎಣ್ಣೆ ಒದಗಿಸುವುದರಲ್ಲಿ ಅವರು ಮತ್ತು ಅವರ ಇಲಾಖೆಯವರು ವಿಫಲರಾಗಿದ್ದಾರೆ ಅದಕ್ಕೋಸ್ಕರ ಅವರನ್ನು ಖಂಡಿಸಬೇಕಾಗುತ್ತದೆ. ಅಲ್ಲದೆ ಇನ್ನೊಂದು ವಿಷಯಕ್ಕೂ ಕೂಡ ಖಂಡಿಸಬೇಕಾಗುತ್ತದೆ ಅದೇನೆಂದರೆ ಇವರು ಮಾಡಿರ ತಕ್ಕಂತಹ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕೆ ಕಂಡಕಂಡವರ ಮೇಲೆಲ್ಲ ತಪ್ಪುಹೊರಿಸುತ್ತಿದ್ದಾರೆ ಸಾರ್ವಜನಿಕರು ಹೆಚ್ಚು ಹೆಚ್ಚು ಸೀಮೆ ಎಣ್ಣೆಯನ್ನು ತೆಗೆದುಕೊಳ್ಳುತ್ತಾ ಇರುವುದರಿಂದ ಈ ರೀತಿ ಆಗದೆ ಎಂದು ಹೇಳುತ್ತಾರೆ. ಜನರು ಸೀಮೆ ಎಣ್ಣೆಯನ್ನು ಏನಾದರೂ ಕುಡಿಯಲಿಕ್ಕೆ ತೆಗೆದುಕೊಳ್ಳುತ್ತಾರೆ ಏನು? ನಿಮ್ಮ ಸರಬರಾಜಿನಲ್ಲಿ ದೋಷ ಬಂದಾಗ ಸಾಮಾನ್ಯವಾಗಿ ನಾವು ತೆಗೆದುಕೊಳ್ಳತಕ್ಕ ಸೀಮೆಎಣ್ಣೆ ಸಾಕಾಗುವುದಿಲ್ಲ ಎಂದು ಎರಡು ಮೂರು ಲೀಟರ್ ಹೆಚ್ಚಿಗೆ ತೆಗೆದುಕೊಂಡಿರಬಹುದು. ಸೀಮೆ ಎಣ್ಣೆ ಹೆಚ್ಚಿಗೆ ಸಿಕ್ಕುತ್ತಾ ಇದ್ದಾಗಲೂ ಕೂಡ ದಾಸ್ತಾನು ಮಾಡಿಕೊಳ್ಳುತ್ತಿದ್ದಾರೆ ಅಂದರೆ ನಿಮ್ಮ ಅಧಿಕಾರಿಗಳು ಬರೆದುಕೊಟ್ಟಿರತಕ್ಕದ್ದನ್ನು ಮಾನ್ಯ ಮಂತ್ರಿಗಳಾದಂತಹ ರಾಮೇಗೌಡರು ಸರಿಯಾಗಿ ನೋಡಿಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಮಾನ್ಯ ರಾಮೇಗೌಡರು, ಅವರ ಇಲಾಖಾ ಅಧಿಕಾರಿಗಳು ಸೀಮೆ ಎಣ್ಣೆ ಸಿಕ್ಕದೆ ಉಂಟಾಗಿರತಕ್ಕ ಹಾಹಾಕಾರ ಏನಿದೆ ಅದರ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಂಡಿಲ್ಲ. ಫುಡ್ ಅಂಡ್ ಸಿವಿಲ್ ಸಪ್ಲೈಸವರು ಜನತೆ ರಸ್ತೆಗೆ ಬಂದು ಗಲಾಟೆ ನಡೆಸುವವರೆಗೂ ಅವರು ಬರುವುದಿಲ್ಲ. ಬೆಂಗಳೂರು ಪಟ್ಟಣದಲ್ಲಿ ಯಾವ ರೀತಿ ಮಾಡಬೇಕು ಅನ್ನುವುದೇ ಗೊತ್ತಾಗುತ್ತಾ ಇಲ್ಲ. ಜನರೆಲ್ಲರೂ ಸೀಮೆ ಎಣ್ಣೆ ಕೊಡಿಸಿ ಸ್ವಾಮಿ ಎಂದು ನಮ್ಮ ಮನೆಯ ಹತ್ತಿರ ಬರುತ್ತಿದ್ದಾರೆ. ಇವೊತ್ತು ಕಟ್ಟಿಗೆ ಹಾಕಿ ಅಡುಗೆ ಮಾಡತಕ್ಕ ಪದ್ಧತಿ ಇಲ್ಲ. ಕಟ್ಟಿಗೆ ಬೆಲೆ ತುಂಬಾ ದುಬಾರಿ ಇದೆ. ಇವೊತ್ತು ಸ್ಲಮ್‌ನಲ್ಲಿ ವಾಸಮಾಡತಕ್ಕ ಬಡಜನತೆಗೆ ಸೀಮೆ ಎಣ್ಣೆ ಸಿಕ್ಕುತ್ತಾ ಇಲ್ಲ. ಇದರ ಬಗ್ಗೆ ಸಿವಿಲ್ ಸಪ್ಲೈ ಇಲಾಖೆಯವರು ಸಾಕಷ್ಟು ಲಕ್ಷ್ಯ ಕೊಟ್ಟಿಲ್ಲ. ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ ಬೆಂಗಳೂರು ನಗರಕ್ಕೆ ಸೀಮಿತವಾಗಿರುವ ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಅವರು ಈ ತೊಡಕನ್ನು ನಿರ್ಮಾಣ ಮಾಡಿದ್ದಾರೆ. ಇಂಡಿಯನ್ ಆಯಿಲ್ ಕಾರ್ಪೋರೇಷನ್‌ನಲ್ಲಿ ಬೆಂಗಳೂರು ಜನತೆಗೆ ಎಷ್ಟು ಬೇಕೋ ಅಷ್ಟೂ ಸೀಮೆ ಎಣ್ಣೆ ದಾಸ್ತಾನು ಇದೆ ಎಂಬ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಅಧಿಕೃತವಾಗಿ ತಿಳಿದಿದ್ದೇನೆ. ಈ ಇಲಾಖೆಯ ಡೈರೆಕ್ಟರವರು ತಮ್ಮದೇ ಆದ ವೈಯುಕ್ತಿಕ ಧೋರಣೆಯನ್ನು ಅನುಸರಿಸಿದ್ದರಿಂದ ಇವತ್ತು ಈ ಒಂದು ಸೀಮೆ ಎಣ್ಣೆ ಅಭಾವ ತಲೆದೋರುವುದಕ್ಕೆ ಕಾರಣವಾಗಿದೆ, ಇಲ್ಲಿ ಒಂದು ವಿರೋಧಾಭಾಸದ ಮಾತನ್ನು ಇಲಾಖೆಯ ನಿರ್ದೇಶಕರು ಏನು ಹೇಳಿದ್ದಾರೆಂದರೆ, ಮೊದಲನೆಯದಾಗಿ, ಸುಮಾರು ೧೮ ಸಾವಿರ ಲೀಟರಿನಷ್ಟು ಸೀಮೆ ಎಣ್ಣೆ ಇಂಡಿಯನ್ ಆಯಿಲ್ ಕಾರ್ಪೋರೇಷನ್‌ನಲ್ಲಿ ಸ್ಟಾಕ್ ಇದೆ. ಯಾರೂ ಯಾವ ಕಾರಣಕ್ಕೂ ಸೀಮೆ ಎಣ್ಣೆ ಸಿಕ್ಕುವುದಿಲ್ಲ ಎಂದು ಹೆದರ ಬೇಕಾಗಿಲ್ಲವೆಂದು ಹೇಳಿದ್ದಾರೆ. ಮತ್ತೆ ಎರಡನೆಯದಾಗಿ ಪತ್ರಿಕಾ ಗೋಷ್ಠಿಯನ್ನು ಕರೆದು ನಗರದ ಪ್ರತಿಯೊಬ್ಬ ನಾಗರೀಕರಿಗೂ ಪ್ರತಿ ರೇಷನ್ ಕಾರ್ಡ್‌ಗೆ ೨-೨ ಲೀಟರ್ ಎಣ್ಣೆ ಕೊಡುತ್ತೇವೆಂದು

ಹೇಳಿದ್ದಾರೆ. ಇದು ಎಂಥ ವಿರೋಧಾಭಾಸಕ್ಕೆ ಎಡೆಕೊಟ್ಟಿದೆ ಎಂಬುದನ್ನು ತಾವೇ ಊಹಿಸಬಹುದು. ರಸ್ತೆಯಲ್ಲಿ ಗಾಡಿಗಳ ಮೇಲೆ ಸುಲಭವಾಗಿ ಎಣ್ಣೆ ಸಿಕ್ಕುವಂತಿದ್ದರೆ ಪ್ರತಿ ಕಾರ್ಡಿಗೆ ಎರಡೆರಡು ಲೀಟರ್ ಕೊಡುತ್ತೇವೆಂದು ಏತಕ್ಕೆ ಹೇಳಬೇಕಾಗಿತ್ತು. ಆದ್ದರಿಂದ ಕೂಡಲೇ ಮಾನ್ಯ ಸಚಿವರು ಆಹಾರ ಇಲಾಖೆಯ ನಿರ್ದೇಶಕರನ್ನು ಕರೆಸಿಕೊಂಡು ಎಲ್ಲಿ ತೊಂದರೆಯಾಗಿದೆ, ಏತಕ್ಕೆ ತೊಂದರೆಯಾಗಿದೆ ಎಂಬುದನ್ನು ಚರ್ಚೆಮಾಡಿ, ಪತ್ತೆ ಹಚ್ಚಿ, ನಗರದ ನಾಗರೀಕರಿಗೆ ಮಾಮೂಲಿನಂತೆ ಸೀಮೆ ಎಣ್ಣೆ ಸಿಕ್ಕುವಂತೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

೨-೩೦ ಪಿ.ಎಂ.

ಒಂದು ವೇಳೆ ಇಲಾಖೆಯವರು ರೇಷನ್ ಕಾರ್ಡ್ ಮೇಲೆ ಸೀಮೆ ಎಣ್ಣೆಯನ್ನು ಹಂಚುವುದಕ್ಕೆ ಹೋದರೆ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಮಾನ್ಯ ಸಚಿವರು ನನ್ನ ಕ್ಷೇತ್ರಕ್ಕೆ ಬಂದರೆ ಅವರಿಗೆ ತೋರಿಸಿಕೊಡುತ್ತೇನೆ. ಸರ್ಕಾರದವರ ಪ್ರಕಾರವೇ ಒಂದು ಸಣ್ಣ ಕುಟುಂಬ ಅಂದರೆ, ಗಂಡ, ಹೆಂಡತಿ ಹಾಗೂ ೩ ಮಕ್ಕಳು ಇರತಕ್ಕ ಸಂಸಾರಕ್ಕೆ ಕೇವಲ ೨ ಲೀಟರ್ ಎಣ್ಣೆಯನ್ನು ಒಂದು ವಾರಕ್ಕೆ ಕೊಟ್ಟರೆ ಸಾಕಾಗುತ್ತದೆಯೇ? ಆ ಎಣ್ಣೆಯಲ್ಲಿ ಅನ್ನ ಬೆಂದರೆ ಬೇಳೆ ಬೇಯುವುದಿಲ್ಲ, ಬೇಳೆ ಬೆಂದರೆ, ಅನ್ನ ಬೇಯುವುದಿಲ್ಲ. ಇಂಥ ಪರಿಸ್ಥಿತಿ ಉಂಟಾದಾಗ ನಾವೂ ಕೂಡಾ ಸರ್ಕಾರದ ವಿರುದ್ಧ ಉಗ್ರವಾಗಿ ಹೋರಾಡಲೇ ಬೇಕಾಗುತ್ತದೆ. ಮಾನ್ಯ ಮಂತ್ರಿಗಳಾದ ಶ್ರೀ ರಾಮೇಗೌಡರೂ ಸಂಸಾರಿಗಳಾಗಿರುವುದರಿಂದ ಒಂದು ವಾರಕ್ಕೆ ಎಷ್ಟು ಸೀಮೆ ಎಣ್ಣೆ ಬೇಕಾಗುತ್ತದೆ ಎಂಬುದನ್ನು ಲೆಕ್ಕ ಪಾಕಿ ಹೇಳಲಿ. ಆದರೆ, ಈ ರೀತಿ ಕೇಂದ್ರ ಸರ್ಕಾರದ ಆರೋಪ ಹೊರಿಸುವುದು ಸರಿಯಲ್ಲ. ಜನವರಿ, ಫೆಬ್ರುವರಿಯಲ್ಲಿ ಸೀಮೆ ಎಣ್ಣೆಗೆ ಅಭಾವ ಬರುತ್ತದೆಂದು ಕಂಡುಬಂದ ಕೂಡಲೇ ಮಾನ್ಯ ಸಚಿವರು ದೆಹಲಿಗೆ ಹೋಗಿ ಕೇಂದ್ರ ಸರ್ಕಾರದವರನ್ನು ಏತಕ್ಕೆ ಕೇಳಲಿಲ್ಲ. ಆ ದಿವಸವೇ ಮಂತ್ರಿಗಳು ಮುಂಜಾಗರೂಕತೆ ಕ್ರಮ ತೆಗೆದು ಕೊಂಡಿದ್ದರೆ, ಇವತ್ತು ಈ ಪರಿಸ್ಥಿತಿ ಉದ್ಭವವಾಗುತ್ತಲೇ ಇರಲಿಲ್ಲ. ತಮ್ಮ ಸಹಾಯಕ್ಕೆ ಬೇಕಾದರೆ ನಮ್ಮ ಪಕ್ಷದ ನಾಯಕರನ್ನೂ ಸಹ ನಿಮ್ಮ ಜೊತೆಯಲ್ಲಿ ದೆಹಲಿಗೆ ಕಳುಹಿಸಿಕೊಡುತ್ತೇವೆ. ಅಲ್ಲಿ ಹೋಗಿ ನಮ್ಮ ಕಷ್ಟಗಳನ್ನು ಅವರಿಗೆ ಹೇಳಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗದುಕೊಳ್ಳಿ. ತಾವು ಹೋಗಿ ಬಂದು ವಾರದ ಕಾಲ ದೆಹಲಿಯಲ್ಲೇ ಕುಳಿತುಕೊಂಡು ನಮಗೆ ಸಾಕಷ್ಟು ಸೀಮೆ ಎಣ್ಣೆಯನ್ನು ತೆಗೆದುಕೊಂಡು ಬನ್ನಿ. ನಾನು ಸೀಮೆ ಎಣ್ಣೆ ಡಬ್ಬವನ್ನೇ ಬಡಿದುಕೊಂಡು ಬಂದು ವಿಮಾನ ನಿಲ್ದಾಣದಿಂದ ನಿಮ್ಮನ್ನು ಸ್ವಾಗತಿಸುತ್ತೇನೆ. ಆದರೆ ಕೇಂದ್ರ ಸರ್ಕಾರದ ಮೇಲೆ ನಿಮ್ಮ ತಪ್ಪನ್ನು ಹೊರಿಸಲು ಮಾತ್ರ ಹೋಗಬೇಡಿ; ಅಥವಾ ಬಳಕೆದಾರರ ಮೇಲೆ ನಿಮ್ಮ ತಪ್ಪನ್ನು ಹೊರಿಸಲು ಹೋಗ ಬೇಡಿ. ಇದನ್ನು ನಾವು ಒಪ್ಪುವುದಿಲ್ಲ. ಇರುವ ತಪ್ಪೆಲ್ಲಾ ನಿಮ್ಮದು ಹಾಗೂ ನಿಮ್ಮ ಅಧಿಕಾರಿ ಗಳದ್ದು.

ಮಾನ್ಯ ಅಧ್ಯಕ್ಷರೆ, ತಮ್ಮ ಮೂಲಕ ಮಾನ್ಯ ಸಚಿವರನ್ನು ನಾನು ಕೇಳಿಕೊಳ್ಳುವುದೇನೆಂದರೆ, ಕೂಡಲೇ ಆಹಾರ ಇಲಾಖೆಯ ನಿರ್ದೇಶಕರನ್ನೂ ಮತ್ತಿತರ ಅಧಿಕಾರಿಗಳನ್ನೂ ಕರೆಸಿಕೊಂಡು ಎಲ್ಲಿ ದೋಷ ಇದೆ ಎಂಬುದನ್ನು ಪತ್ತೆಹಚ್ಚಿ ನಾಳೆಯಿಂದಲೆ ಮಾಮೂಲಿಯಂತೆ ಸೀಮೆ ಎಣ್ಣೆಯನ್ನು ನಾಗರೀ ಕರಿಗೆ ಹಂಚುತ್ತೇವೆ ಎಂದು ಉತ್ತರ ಕೊಡಬೇಕು.

ಶ್ರೀ ಎ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಹೇಳಿಕೆಯ ಪ್ರಕಾರವೇ ಹೋದ ವರ್ಷ ಮತ್ತು ಈ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ಶೇಕಡ ೮೦ರಷ್ಟು ಹೆಚ್ಚಿಗೆ ಸೀಮೆ ಎಣ್ಣೆ ಸರಬರಾಜಾ ಗಿದೆ ಎಂಬುದು ಕಂಡು ಬರುತ್ತದೆ. ಇನ್ನೊಂದು ಕಡೆ ತೈಲ ಶುದ್ಧೀಕರಣ ಕೇಂದ್ರವು ಶೇಕಡ ೭೦ರಷ್ಟು ಕೆಲಸ ಮಾಡುತ್ತಿರುವುದರಿಂದ ನಮಗೆ ಸಾಕಷ್ಟು ಸೀಮೆ ಎಣ್ಣೆ ಸಿಕ್ಕಲಿಲ್ಲವೆಂದು ಹೇಳಿದ್ದಾರೆ. ಒಂದು ವೇಳೆ ಈ ತೈಲ ಶುದ್ಧೀಕರಣ ಕೇಂದ್ರವು ಶೇಕಡ ೭೦ರಷ್ಟು ಕೆಲಸ ಮಾಡಿದ್ದರೆ ಅದು ಬರೀ ಸೀಮೆ ಎಣ್ಣೆಗೆ ಮಾತ್ರ ತೊಂದರೆಯಾಗುವುದಿಲ್ಲ. ಅದು ಡೀಸಲ್‌ಗೂ ಆಗುತ್ತದೆ. ಇವೊತ್ತು ಸಾಕಷ್ಟು ಡೀಸಲ್ ಸಿಕ್ಕದೆ ಪ್ರತಿಯೊಂದು ಪೆಟ್ರೋಲ್ ಬಂಕ್‌ಗಳ ಹತ್ತಿರವೂ ಸಾಲುಸಾಲಾಗಿ ಲಾರಿಗಳು ನಿಂತಿರುವುದನ್ನು ನಾವು ನೋಡುತ್ತಿದ್ದೇವೆ. ಆಟೋ ರಿಕ್ಷಾದವರು, ಲಾರಿಯವರು ಸೀಮೆ ಎಣ್ಣೆಯನ್ನು ಡೀಸಲ್ ಜೊತೆಯಲ್ಲಿ ಕಲಬೆರಕೆ ಮಾಡಿಕೊಂಡು ಉಪಯೋಗಿಸುತ್ತಿದ್ದಾರೆ. ಇದು ಮೊದಲನೇ ಕಾರಣ.

ಇನ್ನು ಎರಡನೆಯದಾಗಿ ಹೇಳುವುದಾದರೆ, ಕಲ್ಲಿದ್ದಲಿನ ಅಭಾವದಿಂದ ನಮಗೆ ಸೀಮೆ ಎಣ್ಣೆ ಸಿಕ್ಕುವುದು ಕಷ್ಟವಾಗಿದೆ ಎಂದು ಹೇಳಿದ್ದಾರೆ. ಸ್ವಾಮಿ, ನಾನು ಹೇಳುತ್ತೇನೆ, ನಮ್ಮ ರಾಜ್ಯದಲ್ಲಿ ಎಲ್ಲೂ ಕೂಡ ಕಲ್ಲಿದ್ದಲನ್ನು ಉಪಯೋಗಿಸುತ್ತಿಲ್ಲ. ಅದು ಏನಿದ್ದರೂ ಉತ್ತರ ಭಾರತದಲ್ಲಿ ಮಾತ್ರ ಉಪಯೋಗಿಸುತ್ತಿದ್ದಾರೆ. ಮಾನ್ಯ ಸಚಿವರು ತಮ್ಮ ಹೇಳಿಕೆಯಲ್ಲಿ ಕೇಂದ್ರ ಸರ್ಕಾರದ ಮೇಲೆ ಹಾಗೂ ತೈಲ ಶುದ್ಧೀಕರಣದ ಕೇಂದ್ರದ ಮೇಲೆ ತಪ್ಪನ್ನು ಏನು ಹೊರಿಸಿದ್ದಾರೆ ಅದು ಸರಿಯಲ್ಲ. ನಮಗೆ ತಿಳಿದು ಬಂದಿರುವಂತೆ ದೊಡ್ಡ ದೊಡ್ಡ ಬಳಕೆದಾರರು ಡೀಸೆಲ್ ಜೊತೆಯಲ್ಲಿ ಈ ಸೀಮೆ ಎಣ್ಣೆಯನ್ನು ಉಪಯೋಗ ಮಾಡಲು ಅವಕಾಶ ಕೊಟ್ಟಿರುವುದರಿಂದ ಈ ಅಭಾವ ಬಂದಿದೆ ಎಂದು. ಇಪ್ಪತ್ತು ಒಂದು ಸಣ್ಣ ಕುಟುಂಬಕ್ಕೆ ಒಂದು ವಾರಕ್ಕೆ ಕನಿಷ್ಟ ೮ ಲೀಟರ್ ಆದರೂ ಎಣ್ಣೆ ಬೇಕಾಗುತ್ತದೆ. ಅಂಥಾದ್ದರಲ್ಲಿ ಕೇವಲ ೨ ಲೀಟರ್ ಕೊಟ್ಟು ನೀವು ಒಂದು ವಾರದತನಕ ಇಷ್ಟನ್ನೇ ಉಪಯೋಗಿಸಬೇಕೆಂದರೆ ಇದು ಸಾಧ್ಯವೆ? ತಾವು ಹೇಳಿರುವಂತೆ ಯಾವ ಬಳಕೆದಾರರೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ಸೀಮೆ ಎಣ್ಣೆಯನ್ನು ಸ್ಟಾಕ್ ಇಟ್ಟುಕೊಳ್ಳಲು ಬೇಕಾದಷ್ಟು ಹಣವಿರುವುದಿಲ್ಲ. ಮುಂದಿನ ವಾರದಲ್ಲಿ ಹಿಂದೂಗಳಿಗೆ ದೊಡ್ಡ ಹಾಗೂ ಪ್ರಾಮುಖ್ಯವಾದ ಯುಗಾದಿ ಹಬ್ಬ ಬರುತ್ತದೆ. ಆಗ ನಾಗರೀಕರಿಗೆ ತೊಂದರೆಯಾಗದ ರೀತಿಯಲ್ಲಿ ಏನೇನು ದಿನಬಳಕೆ ಎಷ್ಟು ಎಣ್ಣೆ ಬೇಕೋ ಅಷ್ಟನ್ನೂ ಸಕಾಲದಲ್ಲಿ ಒದಗಿಸಲು ಈ ಕೂಡಲೇ ಆಹಾರ ಮತ್ತು ಸರಬರಾಜು ಇಲಾಖೆಯ ನಿರ್ದೇಶಕರು ಹಾಗೂ ಇತರೆ ಅಧಿಕಾರಿಗಳನ್ನು ಕರೆಸಿಕೊಂಡು ಒಂದು ಕಡೆ ಕೂತು ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಿ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಂದು ರೇಂಜಿನ ಹಾಕರ್ಸನ್ನು ಇನ್ನೊಂದು ರೇಂಜಿಗೆ ಹೋಗಿ ಎಣ್ಣೆ ತೆಗೆದುಕೊಂಡು ಬನ್ನಿ ಎಂದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಕೂಡಲೇ ದಿನಬಳಕೆ ಎಣ್ಣೆಯನ್ನು ನಾಗರೀಕರಿಗೆ ಸುಲಭವಾಗಿ ಹಾಗೂ ಸಕಾಲದಲ್ಲಿ ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಂ. ವಿ. ರಾಜಶೇಖರನ್.—ಮಾನ್ಯ ಅಧ್ಯಕ್ಷರೆ ಸೀಮೆಎಣ್ಣೆಯ ಬಗ್ಗೆ ಈಗ ಅಭಾವ ಇರತಕ್ಕಂಥ ವಿಚಾರ ಎಲ್ಲರಿಗೂ ತಿಳಿದಂಥ ವಿಷಯವಾಗಿದೆ, ಇದು ಸರ್ಕಾರಕ್ಕೂ ಕೂಡ ತಿಳಿದಿರುತ್ತದೆ. ಈ ರೀತಿ ಅಭಾವ ಇರತಕ್ಕಂಥ ಪರಿಸ್ಥಿತಿಯಲ್ಲಿ ಸರ್ಕಾರದವರು ಯಾವ ರೀತಿ ವ್ಯವಸ್ಥೆ ಮಾಡುತ್ತಿದ್ದಾರೆ ಎನ್ನುವುದು ಪ್ರಶ್ನೆಯಾಗಿ ಇರತಕ್ಕಂಥಾದಾಗಿರುತ್ತದೆ. ಈ ಪ್ರಶ್ನೆಗೆ ಕಡೆಗೆ ಮಾನ್ಯ ಮಂತ್ರಿಗಳು ಹೆಚ್ಚಿನ ಗಮನ ಕೊಟ್ಟಿಲ್ಲವೆಂದು ಹೇಳುತ್ತೇನೆ.

ನಮ್ಮ ಸ್ನೇಹಿತರು ಹೇಳಿದ ಹಾಗೆ ಕೇಂದ್ರ ಸರ್ಕಾರದವರು ಸರಿಯಾದ ರೀತಿಯಲ್ಲಿ ಸರಬರಾಜು ಮಾಡುತ್ತಿಲ್ಲ. ರಿಫೈನರಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರು, ಆದರೆ ಈ ಒಂದು ಅಭಾವ ಪರಿಸ್ಥಿತಿಯನ್ನು ಸುಧಾರಿಸಲು ಸರ್ಕಾರದವರು ಸರಿಯಾದ ರೀತಿಯಲ್ಲಿ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳದೆ ಇರುವುದರಿಂದ ಅಭಾವವನ್ನು ನಿವಾರಣೆ ಮಾಡಲು ಸಾಧ್ಯವಾಗಿಲ್ಲ. ಸರ್ಕಾರದಲ್ಲಿರತಕ್ಕಂಥ ದಾಸ್ತಾನು ಸರಿಯಾದ ರೀತಿಯಲ್ಲಿ ವಿತರಣೆ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡುವ ಬಗ್ಗೆ ಒಂದು ಮಾತನ್ನೂ ಸಹ ಅವರ ಹೇಳಿಕೆಯಲ್ಲಿ ಕೊಟ್ಟಿಲ್ಲ. ಈವತ್ತಿನದಿವಸ ಬಹಳ ಮುಖ್ಯವಾಗಿ ತಿಳಿಯಬೇಕಾದ ವಿಷಯವೆಂದರೆ ಅಭಾವ ನಮ್ಮ ದೇಶಕ್ಕೆ ಮಾತ್ರ ಬಂದಿಲ್ಲ, ಇಡೀ ವಿಶ್ವಕ್ಕೇನೇ ಎಣ್ಣೆಯ ವಿತರಣೆಯ ಅಭಾವ ಬಂದಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರದವರು ಹೆಚ್ಚಿನ ಆದ್ಯತೆಯನ್ನು ಕೊಟ್ಟು ಸರಿಯಾದ ರೀತಿಯಲ್ಲಿ ವಿತರಣೆ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರವೆಂದರೆ ಈವತ್ತಿನದಿವಸ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳ ವಿಚಾರವನ್ನು ತೆಗೆದುಕೊಂಡರೆ ಇದು ಬಹಳ ಗಂಭೀರವಾದ ವಿಚಾರವಾಗುತ್ತದೆ. ಏತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ ಮಾನ್ಯ ಮಂತ್ರಿಗಳು ಗ್ರಾಮಾಂತರ ಪ್ರದೇಶದಿಂದಲೇ ಬಂದಿರತಕ್ಕಂಥವರಾಗಿರುವುದರಿಂದ ೧೦೦ಕ್ಕೆ ೮೦ ಭಾಗ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ಜನ ಅವರ ಕಷ್ಟದ ವಿಚಾರದಲ್ಲಿ ಪ್ರಸ್ಥಾಪ ಮಾಡುತ್ತಿಲ್ಲ. ಗ್ರಾಮಾಂತರ ಪ್ರದೇಶಗಳ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನು 'ಹೇಳಿದ್ದಾರೆಂದಡೆ' ಅನಿವಾರ್ಯ ಇದ್ದಲ್ಲಿ ವ್ಯವಸ್ಥೆಯನ್ನು ಮಾಡುತ್ತೇವೆಂದು ಸೂಚನೆ ಕೊಟ್ಟಿರುತ್ತಾರೆ. ಸ್ವಾಮಿ ನಾನಾದರೂ ಹೇಳುತ್ತೇನೆ ಗ್ರಾಮಾಂತರ ಪ್ರದೇಶಗಳ ವಿಚಾರದಲ್ಲಿ ಈ ರೀತಿಯಾದಂಥ ಒಂದು ಸ್ಟೇಟ್‌ಮೆಂಟ್ ಕೊಡತಕ್ಕಂಥಾದ್ದು ಅಷ್ಟು ಸಾಧುವಾದುದಲ್ಲವೆಂದು ಹೇಳುತ್ತೇನೆ. ಅಂದರೆ ತಮ್ಮ ಸ್ಟೇಟ್‌ಮೆಂಟ್ ಪ್ರಕಾರವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪರಿಸ್ಥಿತಿ ಚೆನ್ನಾಗಿದೆ ಎಂದು ತಾವು ಭಾವಿಸಿಕೊಳ್ಳಬಹುದು. ಈವತ್ತಿನದಿವಸ ಒಂದು ಲೀಟರ್ ಎಣ್ಣೆ ಮೂರು ರೂಪಾಯಿಗಳನ್ನು

ಕೊಟ್ಟರೂ ಸಹ ಸೀಮೆಎಣ್ಣೆ ಸಿಗುತ್ತಿಲ್ಲ. ಪಟ್ಟಣ ಪ್ರದೇಶಗಳಲ್ಲಿರತಕ್ಕಂಥ ಜನರು ಒಂದು ಲೀಟರ್ ಎಣ್ಣೆಗೆ ೫-೬ ರೂಪಾಯಿಗಳಾದರೂ ಕೊಟ್ಟು ಕೊಂಡುಕೊಳ್ಳುವ ಶಕ್ತಿಯನ್ನು ಪಡೆದಿರುತ್ತಾರೆ ಆದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಜನರಿಗೆ ದಿವಸಕ್ಕೆ ಎರಡು ರೂಪಾಯಿ ಕೂಲಿ ಸಿಗುವುದು ದುರ್ಲಭವಾಗಿರುತ್ತದೆ. ಇಂಥ ಒಂದು ಪರಿಸ್ಥಿತಿ ಇರುವಾಗ ಮಾನ್ಯ ಮಂತ್ರಿಗಳು ಬಹಳ ಸರಳವಾದ ರೀತಿಯಲ್ಲಿ ಹೇಳುತ್ತಿರುವುದರ ಬಗ್ಗೆ ಬಹಳ ವ್ಯಥೆಯಾಗುತ್ತದೆ. ಈವತ್ತಿನದಿವಸ ಮಂತ್ರಿ ಪದವಿ ಇರಬಹುದು, ನಾಳೆ ದಿವಸ ಮಂತ್ರಿ ಪದವಿ ಹೋದ ಮೇಲೆ ಮತ್ತೆಗ್ರಾಮಾಂತರ ಪ್ರದೇಶಕ್ಕೇನೆ ಹೋಗಬೇಕಾಗುತ್ತದೆಂದು ತಿಳಿಯಬೇಕು.

ಮತ್ತೊಂದು ವಿಚಾರವೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಜನತೆ ಎದುರಿಸುತ್ತಿರುವ ಗಂಭೀರವಾದ ಸಮಸ್ಯೆ ಎಂದರೆ ತಮಗೆ ತಿಳಿದ ಹಾಗೆ ಪರೀಕ್ಷೆಗಳ ಕಾಲ ಸಮೀಪಿಸುತ್ತಿದೆ. ಸಾಮಾನ್ಯವಾಗಿ ಎಲ್ಲಿಯ ಮಕ್ಕಳು ಓದುವುದಕ್ಕೆ ಸೀಮೆ ಎಣ್ಣೆಯ ಬುಡ್ಡಿಗಳನ್ನೇ ಉಪಯೋಗಿಸುವುದು ಸರ್ವೆ ಸಾಮಾನ್ಯವಾಗಿರುತ್ತದೆ. ಪಟ್ಟಣಗಳಲ್ಲಿಯಾದರೋ ಎಲೆಕ್ಟ್ರಿಸಿಟಿ ಇರುತ್ತದೆ, ಮನೆಯಲ್ಲಿ ಎಲೆಕ್ಟ್ರಿಸಿಟಿ ಇಲ್ಲದಿದ್ದರೆ ಬೀದಿ ಲೈಟು ಕಂಬದಡಿಯಲ್ಲಾದರೂ ಓದಿಕೊಳ್ಳುವಂಥ ಒಂದು ಸೌಲಭ್ಯವಿರುತ್ತದೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಈ ಒಂದು ಸೌಲಭ್ಯವೂ ಇರುವುದಿಲ್ಲ. ಆದ್ದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗುತ್ತಿರುವುದನ್ನು ಗಮನಿಸಿ ಇದನ್ನು ಹೋಗಲಾಡಿಸಲು ಯಾವ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಮಾನ್ಯ ಮಂತ್ರಿಯವರು ಹಳ್ಳಿಗಳಿಗೂ ಕೂಡ ಕಾರ್ಡ್ ಪಂಚುವ ವ್ಯವಸ್ಥೆಯನ್ನು ಮಾಡಿದ್ದೇವೆಂದು ತಿಳಿಸಿದ್ದಾರೆ. ಈ ರೀತಿಯಾಗಿ ಕಾರ್ಡ್‌ಗಳನ್ನು ಕೊಟ್ಟು ಅದರ ಮೇಲೆ ೨ ಲೀಟರ್ ಸೀಮೆ ಎಣ್ಣೆಯನ್ನು ಹಂಚಿದರೆ ಇದು ಎಷ್ಟರಮಟ್ಟಿಗೆ ಸಾಕಾಗುತ್ತದೆಂಬುದರ ಬಗೆಯೂ ವಿಚಾರ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಸ್ನೇಹಿತರು ಹೇಳಿದಹಾಗೆ ಹಳ್ಳಿಗಳಿಗೆ ಸಾಕಷ್ಟು ಸೀಮೆ ಎಣ್ಣೆಯನ್ನು ಸರಬರಾಜು ಮಾಡಿ ವಿತರಣೆ ಮಾಡುವ ಕಾರ್ಯವನ್ನು ಕೈಗೊಳ್ಳಬೇಕು ಇಷ್ಟೊಂದು ತೀವ್ರ ಪರಿಸ್ಥಿತಿಯನ್ನು ಎದುರಿಸುತ್ತಿರುವ ಗ್ರಾಮಾಂತರ ಪ್ರದೇಶದ ಜನತೆಯ ಬಗ್ಗೆ ಚರ್ಚೆ ಮಾಡಲು ಎರಡು ಗಂಟೆಗಳ ಕಾಲವಾದರೂ ಕೊಡಬೇಕೆಂದು ಹೇಳುತ್ತಾ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕಂಥ ನಮ್ಮ ಸ್ನೇಹಿತರು ಏನು ಇದ್ದಾರೆ ಅವರು ಇದರ ಬಗ್ಗೆ ಹೆಚ್ಚಿನ ಕಾಳಜಿಯನ್ನು ಪಡೆದು ತಮ್ಮ ಮೂಲಕ ಪರಿಹಾರವನ್ನು ದೊರಕಿಸಲಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ.ಲಕ್ಷ್ಮೀಸಾಗರ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಕೊಟ್ಟರತಕ್ಕಂಥ ಉತ್ತರವನ್ನು ಓದಿದೆನು. ಅಭಾವ ಸಂಭವಿಸಬಹುದಾದಂಥ ಸನ್ನಿವೇಶ ಕಂಡುಬಂದ ಮೇಲೆ ಇದರ ಬಗ್ಗೆ ಪೂರ್ವಭಾವಿ ಯೋಚನೆಯನ್ನು ಮಾಡಿ ಸಾಕಷ್ಟು ದಾಸ್ತಾನು ಇಟ್ಟುಕೊಂಡು ಜನರಿಗೆ ವಿತರಣೆ ಮಾಡತಕ್ಕಂಥ ಕೆಲಸವನ್ನು ಮಾಡಬೇಕಿತ್ತು. ಆದರೆ ಇವರು ಆ ರೀತಿಯಾದ ಕೆಲಸವನ್ನು ಮಾಡಲು ಆಗಲಿಲ್ಲ. ಇದರಿಂದ ಇವರ ಆಡಳಿತೆಯ ನಡವಳಿಕೆಯು ಯಾವ ರೀತಿ ನಡೆಯುತ್ತಿದೆ ಎಂಬುದು ತಿಳಿಯುತ್ತದೆ. ಇದರ ಬಗ್ಗೆ ಹೆಚ್ಚಿಗೆ ವಿವರಣೆಯನ್ನು ಕೊಡುವುದಕ್ಕೆ ಹೋಗುವುದಿಲ್ಲ, ಈಗಾಗಲೇ ನಮ್ಮ ಸ್ನೇಹಿತರು ಸಾಕಷ್ಟು ಮಾತನಾಡಿತ್ತಿದ್ದಾರೆ.

ಇಲ್ಲಿ ಮುಖ್ಯವಾಗಿ ಮತ್ತೊಂದು ವಿಚಾರವನ್ನು ಹೇಳಲಿಕ್ಕೆ ಇಷ್ಟಪಡುವುದೇನೆಂದರೆ ಎರಡು ಲೀಟರ್ ಸೀಮೆಎಣ್ಣೆ ಕೊಡುತ್ತೇವೆಂದು ಹೇಳಿರುತ್ತಾರೆ. ಈ ಎರಡು ಲೀಟರ್ ಎಣ್ಣೆಯನ್ನು ತೆಗೆದುಕೊಂಡರೆ ಅದರಲ್ಲಿ ನಿಜವಾಗಿಯೂ ಒಂದೂವರೆ ಲೀಟರ್ ಎಣ್ಣೆ ಮಾತ್ರ ಇರುತ್ತದೆ. ಇನ್ನು ಅರ್ಧ ಲೀಟರ್ ಎಣ್ಣೆ ಇರುವುದೇ ಇಲ್ಲ. ಒಂದು ದಿವಸ ನನ್ನ ಕ್ಷೇತ್ರವಾದ ಚಿಕ್ಕಪೇಟೆಯಲ್ಲಿ ಜನರಿಂದ ದೂರು ಬಂದಾಗ ಇದನ್ನು ಪರೀಕ್ಷಿಸಲು ನಾನು ಪ್ರಯತ್ನಪಟ್ಟಾಗ ಬೇರೆ ಬೇರೆ ಕ್ಷೇತ್ರಗಳಿಂದ ಹೆಣ್ಣು ಮಕ್ಕಳು, ದೊಡ್ಡವರು ಚಿಕ್ಕವರು ಎಲ್ಲರೂ ಡಬ್ಬಗಳನ್ನು ಹಿಡಿದುಕೊಂಡು ಬಂದು ನನ್ನನ್ನು ಅವಾಚ್ಯ ಶಬ್ದದಿಂದ ಬೈಯ್ದರು. ಸದ್ಯಕ್ಕೆ ಹೊಡೆಯುವ ಒಂದು ಕೆಲಸವನ್ನು ಮಾಡಲಿಲ್ಲ. ಎಣ್ಣೆಯನ್ನು ಅಳೆಯುವುದರಲ್ಲಿ ಮಾಡುತ್ತಿರುವ ಮೋಸದ ಬಗ್ಗೆ ವಿವರಿಸಿದರು. ಎರಡು ಲೀಟರ್ ಎಣ್ಣೆಯನ್ನು ತೆಗೆದುಕೊಂಡರೆ ಅದರಲ್ಲಿ ನಿಜವಾಗಿಯೂ ಅರ್ಧಲೀಟರ್ ಎಣ್ಣೆಯಷ್ಟು ಕಡಿಮೆ ಇರುತ್ತದೆ. ಹೆಣ್ಣು ಮಕ್ಕಳು ಎಣ್ಣೆಯನ್ನು ಅಳೆಸಿಕೊಳ್ಳುವಾಗ ಅಳತೆಯಲ್ಲಿ ಕಡಿಮೆ ಕೊಟ್ಟು ಅವರನ್ನು ಗದರಿಸಿ ಕಳುಹಿಸುತ್ತಾರೆ ಗಾಡಿ ವ್ಯಾಪಾರಿಗಳು. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ, ಅಳತೆ ಮಾಡತಕ್ಕಂಥ ಪಾತ್ರೆಗಳನ್ನು ತಾವು ಯಾವಾಗಲಾದರೂ ಪರೀಕ್ಷೆ ಮಾಡಿದ್ದೀರಾ ? ಈ ಮೂರಾಟ

ಗಾರರಿಗೂ ಮತ್ತು ಇಲಾಖೆಯ ಅಧಿಕಾರಿಗಳಿಗೂ ಏನಾದರೂ ಸಂಬಂಧವಿರುತ್ತದೆಯೇ ? ಇಪ ರಿಬ್ಬರೂ ಜನರಿಗೆ ತೊಂದರೆಯನ್ನು ಕೊಡಬೇಕು ಎನ್ನುವ ಒಂದು ಒಪ್ಪಂದ ಮಾಡಿಕೊಂಡಿರಂತ್ತಾ ರೆಯೇ ಎಂದು ಈವತ್ತಿನದಿವಸ ಕೇಳಬೇಕಾಗಿರುತ್ತದೆ. ಆದ್ದರಿಂದ ಇನ್ನೂ ಮುಂದಾದರೂ ಇಲಾಖೆ ಯವರು ಜನರಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಆಸಕ್ತಿಯ ನ್ನು ವಹಿಸಿ ತೊಂದರೆಯನ್ನು ತಪ್ಪಿಸಿ ವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲದೆ ಹೋದರೆ ಜನರು ದಂಗೆ ಏಳುವ ಪ್ರಸಂಗ ಬರುತ್ತದೆಂದು ಹೇಳುತ್ತೇನೆ. ಇದು ಇಷ್ಟೇ ಅಲ್ಲ ಅನೇಕ ಪಸ್ತುಗಳ ಬಗ್ಗೆಯೂ ಪ್ರಸ್ತಾಪ ಮಾಡಬೇಕೆಂದು ಇದ್ದೆ. ಆದರೆ ಈವತ್ತಿನದಿವಸ ಸೀಮೆ ಎಣ್ಣೆಯ ವಿತರಣೆಯ ಬಗ್ಗೆ ಪ್ರಸ್ತಾಪ ಮಾಡುತ್ತಿರುವುದರಿಂದ ಈಗ ಉಂಟಾಗಿರುವ ಅಭಾವವನ್ನು ನಿವಾರಣೆ ಮಾಡಲು ಪ್ರಯತ್ನ ಮಾಡದೆಹೋದರೆ ಜನರು ದಂಗೆ ಏಳುತ್ತಾರೆಂದು ತಮ್ಮ ಮೂಲಕ ಈ ವಿಷಯವನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸು ತ್ತೇನೆ.

SRI C. M. ARUMUGHAM (K.G.F.).—Sir, I just now asked our hon'ble Minister whether he has any arrangements for the supply of kerosene or ensuring supply of kerosene for mofussil areas and he said that he will take action tomorrow. The hon. member from Bangalore City were very effective in asking clarifications. They are residing in the head quarters, the Director of Food and Civil Supplies is in Bangalore, the Government is in Bangalore, the hon'ble Minister is also in Bangalore and the entire Government machinery is in Bangalore. People are suffering for want of kerosene. If that is is the state of affairs of the people of Bangalore about supply of kerosene, what about others who are living 100, 200, 300 and 400 miles away from Bangalore. The supply of kerosene in mofussil areas is very bad for the last 19 days at least. Kolar District consist of 11 taluks and there is no kerosene ; the supply of kerosene is very inadequate- Sir. as my hon. friend Sri M, V, Rajashekharan put it 80 per cent of our population live in villages, where people use kerosene not for boiling milk, but for light puposes. I have seen certain villages in Bangalore where there are no electric lights. I come from K G.F. Sir, you may be under the impression that we are producing gold and the workers of gold mines are living in houses provided with electric lights. 80 per cent of the workers of gold mines are living in houses where there are no electric lights.

So, kerosene is a must for all the workers to have lights in their homes. So far neither the Assistant Director of Food Supplies nor the Rationing Officer has visited any of the areas which are affected by the scarcity of kerosene. There seems to be something wrong with the Civil Supplies Department. Sri Ramegowda is an experienced politician. he knows the difficulties of the villagers but his department has not taken any action to rectify the defects noticed in his department. You must take some action against the officers who have failed in

their duties. You should not have waited for the matter to be raised on the floor of this houses After 30 long years of indepen dence we are asking for kerosene not petrol for our cars. The people of Karnataka despite many Five Year Plans are driven to the pitch of askieg for kerosene. I appeal to the Hon. Minister for Civil Supplies to make immediate arrangements for the supply of kerosene to all the areas in the state where there is deatch for kerosene. He must ensure supply of kerosene not only to the urban people but for all the people residing in the rural areas.

ಶ್ರೀ ಎಚ್. ಗಂಗಾಧರಸ್ : - ನಾನೂ ಕೂಡ ಇದೇ ವಿಷಯದಲ್ಲಿ ಮೈಸೂರಿಗೆ ಸಂಬಂಧಪಟ್ಟ ಹಾಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕೊಟ್ಟಿದ್ದೆ. ಸೀಮೆಎಣ್ಣೆ ಸಿಗದಿದ್ದುದಕ್ಕಾಗಿ ಎದ್ದು ಬಾರಿ ಹೆಣ್ಣುಮಕ್ಕಳು ದ್ದು ರಿಂದಲೂ ಅಧಿಕಾರಿಯವರ ಕಚೇರಿಗೆ ಮೆರವಣಿಗೆ ಯಲ್ಲಿ ಹೋಗಿದ್ದಾರೆ. ಆದರೂ ಇನ್ನೂ ವ್ಯವಸ್ಥೆಯೇನೂ ಸರಿಯಾಗಿ ಆಗಿಲ್ಲ. ಸೀಮೆಎಣ್ಣೆ ಸಾಕಷ್ಟು ಸರಬರಾಜು ಆಗಿಲ್ಲ. ಇದರ ಜೊತೆಗೆ ಸೌದೆ ಕೂಡ ಸಿಗುತ್ತಿಲ್ಲ. ಮೈಸೂರಿನಲ್ಲಿ ಮೂರು ನಾಲ್ಕು ಜನಕ್ಕೆ ಮಾತ್ರ ಸೌದೆ ರೀಲಿಂಗಿಗೆ ಲೈಸನ್ಸ್ ಕೊಟ್ಟಿದ್ದಾರೆ. ಸಾಮಾನ್ಯ ಜನರಿಗೆ ಸರಿಯಾಗಿ ಸೌದೆ ಸಿಗುವ ವ್ಯವಸ್ಥೆ ಕೂಡ ಅಲ್ಲಿಲ್ಲ. ಸೌದೆಪೇಟೆಯಲ್ಲಿ ಹೊಟೇಲ್ಗಳಿಗೆ ಹೊರತಾಗಿ ಮಾರಾಟವಾಗುತ್ತಿದೆ. ಈ ಪರಿಸ್ಥಿತಿ ಮೈಸೂರಲ್ಲಿದ್ದು ಅಲ್ಲಿನ ಜನರಿಗೆ ತುಂಬಾ ತೊಂದರೆಯಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡು ಸೀಮೆಎಣ್ಣೆ ಮತ್ತು ಸೌದೆ ಬರೀ ಸರಿಯಾದ ರೀತಿಯಲ್ಲಿ ವಿತರಣೆಯಾಗುವಂಥ ವ್ಯವಸ್ಥೆಯನ್ನು ಮಾಡಬೇಕೆಂ. ರೇಷನ್ ಕಾರ್ಡ್ ಮೂಲಕ ಸೀಮೆಎಣ್ಣೆ ಕೊಡುವ ವ್ಯವಸ್ಥೆಯನ್ನು ಅಲ್ಲಿ ಮಾಡಿಲ್ಲ. ಜಿಲ್ಲಾಧಿಕಾರಿಗಳು ಇದರ ಬಗ್ಗೆ ಸಭೆ ಕರೆದು ವಿಚಾರ ಮಾಡಿ ರೇಷನ್ ಕಾರ್ಡಿನಲ್ಲಿ ಕೊಟ್ಟರೆ ಉಪಯೋಗವಿಲ್ಲದೆ ಇರುವವರೂ ಕೂಡ ತೆಗೆದುಕೊಳ್ಳುವ ಸಂಭವವಿದ್ದು ಇದರಿಂದ ಅಷ್ಟು ಅನುಕೂಲವಾಗುವುದಿಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ. ಕಾರಣಗಳೇನೇ ಇರಲಿ ಅದು ಮುಖ್ಯವಲ್ಲ. ಈಗ ಸೀಮೆಎಣ್ಣೆ ಸರಬರಾಜು ಸಾಕಷ್ಟು ಆಗಬೇಕು. ಜೊತೆಗೆ ಸೌದೆ ಕೂಡ ಅಡಿಗೆ ಮಾಡುವುದಕ್ಕೆ ಆಗುವಷ್ಟಾದರೂ ಕೂಡ ಸಿಗುವಂತೆ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಗಮನ ಕೊಡಬೇಕೆಂದು ಹೇಳಿ ಮೈಸೂರಿನ ಜನತೆಯ ಪರವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ರಾಮೇಗೌಡ :- ಮಾನ್ಯ ಅಧ್ಯಕ್ಷರೇ, ನನ್ನ ಗೆಳೆಯ ಶಾಸಕರು ಹೇಳಿದ ಎಲ್ಲಾ ವಿಚಾರ ಗಳನ್ನೂ ನಾನು ಗಮನಿಸಿದ್ದೇನೆ. ಸೀಮೆಎಣ್ಣೆ ಪಂಚಿಕೆಯಲ್ಲಿ ಸರ್ಕಾರದ ಜವಾಬ್ದಾರಿ ಇದೆ ಎಂದು ನಾನು ತಿಳಿದಿದ್ದೇನೆ. ಆದರೆ ನನ್ನ ಶಾಸಕ ಸ್ನೇಹಿತರು ಹೇಳಿದಷ್ಟು ಜೀವಾಜಾಬ್ದಾರಿಯಾಗಿ ನಾನಿಲ್ಲ. ನಾನು ೧೬ನೇ ತಾರೀಖು ಮುಂಬಯಿಗೆ ಹೊರ ಹೋರಟಿರುವ ಬಗ್ಗೆ ಪತ್ರಿಕೆಯನ್ನು ತರಿಸಿ ಓದಿದಾಗ ಸೀಮೆಎಣ್ಣೆ ಅಭಾವ ಕರ್ನಾಟಕ ರಾಜ್ಯದಲ್ಲಿದೆ ಎಂಬುದನ್ನು ಅದರಲ್ಲಿ ಕಂಡೆ. ನಾನು ವಿಮೋಪ್ಲೇನ್ನಲ್ಲಿ ಕಾಫಿ ಕುಡಿಯುವಾಗ ನನಗೆ ಸೀಮೆಎಣ್ಣೆ ಪಾಕೆಟ್ ಬಂತು. ಪತಕ್ಕೆಂದರೆ ನನ್ನ ಮನಸ್ಸು ಅಷ್ಟು ಗಾಬರಿಯಾಗಿ ಇಷ್ಟು ಅಭಾವ ಸಮ್ಮ ರಾಜ್ಯದಲ್ಲಿ ಬಂದಿದೆಯಲ್ಲಾ ನಮ್ಮ ರಾಜ್ಯದ ಜನರು ಎಷ್ಟು ತೊಂದರೆಪಡುತ್ತಿದ್ದಾರೋ ಎಂದು ಚಿಂತೆಯಂಟಾಯಿತು. ಆದ್ದರಿಂದ ನಾನು ವಿಮಾನ ಇಳಿದ ತಕ್ಷಣ ಅಧಿಕಾರಿಗಳನ್ನು ಕರೆಸಿ ಯಾವ ರೀತಿಯಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಹೇಳಿದ್ದೇನೆ. ಅದರ ವಿಚಾರವಾಗಿ ಸಾಕಷ್ಟು ಆಲೋಚನೆ ಮಾಡುತ್ತಿದ್ದೇನೆ. ನಿನ್ನೆ ರಾತ್ರಿ ೧೧ ಗಂಟೆ ಯವರೆಗೂ ಅಧಿಕಾರಿಗಳ ಜೊತೆ ಕಲೆತು ಚರ್ಚೆ ಮಾಡಿದ್ದೇನೆ. ಬೆಳಿಗ್ಗೆ ೮-೩೦ ಗಂಟೆಯಿಂದ ಇಂಡಿಯನ್ ಆಯಿಲ್ ಕಂಪನಿಯವರನ್ನು ಮತ್ತು ನಮ್ಮ ಅಧಿಕಾರಿಗಳನ್ನು ಕರೆಸಿ ಚರ್ಚೆ ಮಾಡಿದ್ದೇನೆ. ಈಗ ತಪ್ಪು ಎಲ್ಲಾಗಿದೆ, ಏನಾಗಿದೆ ಎಂಬುದನ್ನು ನಮಗೆ ಹೇಳಿದರೆ ಆದರಿಂದ ಪ್ರಯೋಜನವಾಗುವುದಿಲ್ಲ. ಆದರೆ ತಪ್ಪು ಏನು ಎಂಬುದನ್ನು ಕಂಡು ಹಿಡಿಯಲಿಲ್ಲ ಎಂದು ಮಾತ್ರ ಯಾಕ್ಯ ಸಚಿವರು ಹೇಳಬಾರದು. ತಪ್ಪು ಮಾಡಿದ್ದಕ್ಕಾಗಿ ಡಾಕರ್ಸ್ ಮತ್ತು ಡೀಲರ್ಸ್ಗಳ ಮೈಕೆ ಏ ಕ್ರಿಮಿನಲ್ ಕೇಸುಗಳನ್ನು ಹಾಕಿಸಿದ್ದೇನೆ; ಇಷ್ಟು ಮಾಡಿದಮೇಲಾದರೂ ನನಗೆ ಆ ಬಗ್ಗೆ ತಾನಸ್ಸಿಗೆ ಏಂಬುದನ್ನು ತಾವುಗಳೆಲ್ಲಾ ತಿಳಿದುಕೊಳ್ಳಬೇಕು. ನಾನು ಬೇಜವಾಬ್ದಾರಿಯಿಂದ ಇಲ್ಲ ಎಂಬುದನ್ನು ತಾವು ತಿಳಿದುಕೊಂಡರೆ ಅಷ್ಟೇ ನನಗೆ ಸಂತೋಷ. ಶ್ರೀಮಾನ್ ಎಂ. ವಿ. ರಾಜಶೇಖರನ್ ಅವರು ಹಳ್ಳಿಗಳಲ್ಲಿ ಜನರು ಬೆಂಕಿ ಗಿ ಕಷ್ಟಪಡುತ್ತಿದ್ದಾರೆ ಎಂಬ

ಮಾತನ್ನು ಹೇಳಿದರು. ಆ ಬಗ್ಗೆ ಅಷ್ಟು ಚೆನ್ನಾಗಿ ಯೋಚಿಸಿರುವುದನ್ನು ಎಂದು ನನಗೆ ಬಹಳ ಸಂತೋಷವಾಯಿತು. ಅವರು ೧೨ ವರ್ಷ ಪಾರ್ಲಿಮೆಂಟ್ ಸದಸ್ಯರಾಗಿದ್ದವರು. ರಾಜ್ಯದಲ್ಲಿ ಕೂಡ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸೇವೆ ಮಾಡಿದ್ದಾರೆ. ಇವರು ಬೆಳಿಗ್ಗೆ ಹಳ್ಳಿಗೆ ಹೋಗುತ್ತಾರೆ, ರಾತ್ರಿ ಬೆಂಗಳೂರಿಗೆ ಬರುತ್ತಾರೆ. ಆದರೆ ನಾನು ರಾತ್ರಿ ಬೆಳಿಗ್ಗೆ ಎರಡೂ ಮತ್ತು ಹಳ್ಳಿಯಲ್ಲೇ ಇರುತ್ತೇನೆ. ಅಷ್ಟೇ ನಮಗೂ ಅವರಿಗೂ ಇರುವ ವ್ಯತ್ಯಾಸ.

ಶ್ರೀ ಎಂ. ಪಿ. ರಾಜಲೇಖರನ್ :—ರಾತ್ರಿ ಅಲ್ಲೇ ಇದ್ದರೆ ಜನರಿಗೆ ಇಷ್ಟೊಂದು ಕಷ್ಟವಾಗುತ್ತಾ ಇರಲಿಲ್ಲ.

ಶ್ರೀ ಜಿ. ರಾಮೇಗೌಡ :—ಹಳ್ಳಿಯ ಜನರ ಕಳವಳವೇನು ಎಂಬುದರ ಬಗ್ಗೆ ಮಾನ್ಯ ಸದಸ್ಯರಾದ ರಾಜಲೇಖರನ್ ಅವರು ವಿವರವಾಗಿ ಹೇಳಿದ್ದನ್ನು ನಾನು ಮೆಚ್ಚಿದ್ದೇನೆ. ಆದಕ್ಕಾಗಿ ನಾನು ಅವರಿಗೆ ನನ್ನ ವಂದನೆಗಳನ್ನೂ ಸಲ್ಲಿಸುತ್ತೇನೆ. ಅಮೇರಿ ಶ್ರೀಮಾನ್ ರಾಂದೇವ್ ಅವರು ಸೀಮೆಎಣ್ಣೆ ಬಗ್ಗೆಲ್ಲ ಎಂದು ಬಾಟಲನ್ನೇ ಇಲ್ಲಿಗೆ ತಂದು ತೋರಿಸಿದರು. ನಾನು ಮತ್ತು ಅವರು ಬಹಳ ದಿನದಿಂದ ಸ್ನೇಹಿತರು. ಅವರನ್ನು ನಾನು ಯಾತಕ್ಕೆ ಮೆಚ್ಚಿದ್ದೇನೆ ಎಂದರೆ ಅವರ ಸೇವಾಮನೋಭಾವನೆಯನ್ನು ನೋಡಿ. ಅವರಲ್ಲಿ ಸೇವಾ ಮನೋಭಾವ ಇದೆ. ಒಂದೇ ಬಡಾವಣೆಯಲ್ಲಿ ನಾವು ಅವರು ಜೀವನ ನಡೆಸಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡಿದ್ದೇವೆ. ಅವರು ಇಲ್ಲಿಗೆ ಸೀಮೆಎಣ್ಣೆಗೋಸ್ಕರ ಬಾಟಲ್ ಹಿಡಿತ್ತುಕೊಂಡು ಬರುವ ಅವಶ್ಯಕತೆ ಇರಲಿಲ್ಲ. ನನಗೆ ಫೋನ್ ಮಾಡಿದ್ದರೆ ಅವರ ಮನೆಗೇ ದಬ್ಬಲಲ್ಲಿ ಸೀಮೆಎಣ್ಣೆಯನ್ನು ಕಳಿಸಿಸಿಕೊಡುತ್ತಿದ್ದೆ.

೩. ಪಿ.ಎಂ

ಶ್ರೀ ಪಿ. ರಾಮುದೇವ್ :—ಈಗಾಗಲೇ ಅವರು ಒಂದು ಬಾಟಲ್ ಸೀಮೆಎಣ್ಣೆಯನ್ನು ಕೊಡಿಸಿಕೊಡಿ.

ಶ್ರೀ ಜಿ. ರಾಮೇಗೌಡ :—ನಾನು ಈಗ ಇಲ್ಲಿದ್ದೇನೆ. ನಿಮ್ಮ ಮನೆಯ ವಿಳಾಸವನ್ನು ತಿಳಿದುಕೊಂಡು ವಿಶೇಷವಾಗಿ ಕಳುಹಿಸುತ್ತೇನೆ. ನನಗೆ ಇದರ ಬಗ್ಗೆ ಸ್ವಲ್ಪ ಮಟ್ಟಿಗಾದರೂ ಕೆಲಸ ಮಾಡುವ ತಕ್ಕಂಥ ಶಕ್ತಿ ಇದೆ. ಆದರೆ ಆ ಶಕ್ತಿ ನಿಮ್ಮಿಂದ ನನಗೆ ಬರಬೇಕು. ನಿಮ್ಮೆಲ್ಲರ ಸಹಕಾರ ಇದ್ದರೆ ಇನ್ನಷ್ಟಕ್ಕಂಥ ತೊಂದರೆಯನ್ನು ಖಂಡಿತ ಸರಿ ಮಾಡುತ್ತೇನೆ. ಶ್ರೀಮಾನ್ ಮಳ್ಳೂರು ಆನಂದರಾಮ್ ರವರು ಪ್ರಾತಿನಿಧ್ಯದಲ್ಲಿ, ೧೦೦ ಕೆ.ಎಲ್. ಎಂಬುದಾಗಿ ಹೇಳಿದರು. ೧೨೫೦ ಕೆ.ಎಲ್ ಈಗ ಇದೆ. ೪೦೦ ಕೆ.ಎಲ್ ಬರುತ್ತಾ ಇದೆ. ಇದನ್ನು ಸಂಜೆಯೊಳಗಾಗಿ ೧೬೫೦ ಕೆ.ಎಲ್ ಆಗುತ್ತದೆ. ರಿಫೈನರೀಸ್‌ನಲ್ಲಿ ಒಂದು ದಿನಕ್ಕೆ ೧೦೦ ಕೆ.ಎಲ್‌ನ್ನು ಬಿಡುಗಡೆ ಮಾಡುತ್ತಿದ್ದರು. ಇದನ್ನು ೧೦-೨೦ರಲ್ಲಿ ಸಂಬಂಧಪಟ್ಟವರನ್ನೂ ಹಾಗೂ ಅಧಿಕಾರಿಗಳನ್ನು ಕರೆದು ಮಾತನಾಡಿ ೭೦೦ ಕೆ.ಎಲ್‌ನ್ನು ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇನೆ. ಒಂದು ಕಾರ್ಡಿಗೆ ಇಂತಿಷ್ಟು ಲೀಟರ್ ಸೀಮೆಎಣ್ಣೆಯನ್ನು ಕೊಡುವ ಹಾಗೆ ವ್ಯವಸ್ಥೆ ಮಾಡಿಸುತ್ತೇನೆ. ನಾಳೆ ಸಂಜೆಯೊಳಗೆ ಇದೇ ತೊಂದರೆ ಇದ್ದರೆ ೫ ಲೀಟರ್ ಸೀಮೆಎಣ್ಣೆಯನ್ನು ಒಂದು ಕಾರ್ಡಿಗೆ ಕೊಡುವ ಹಾಗೆ ವ್ಯವಸ್ಥೆ ಮಾಡುತ್ತೇನೆ. ಆದರೆ ಇದರ ಬಗ್ಗೆ ನಾನು ಮನೆಸ್ಸು, ಮಾಡಲಿಲ್ಲ ಎಂಬುದಾಗಿ ದಯವಿಟ್ಟು ತಿಳಿದುಕೊಳ್ಳಬೇಡಿ. ಶ್ರೀಮಾನ್ ಟಿ. ಆರ್. ಶಾಮಣ್ಣನವರ ಉತ್ತೇಜನಕ್ಕೂ, ಶ್ರೀಮಾನ್ ಎಂ. ಪಿ. ರಾಜಲೇಖರನ್‌ರವರ ಉತ್ತೇಜನಕ್ಕೂ ಬಹಳ ವ್ಯತ್ಯಾಸ ಇದೆ. ಒಬ್ಬೊಬ್ಬರು ಒಂದೊಂದು ತರಹದ ಉತ್ತೇಜನವನ್ನು ಕೊಟ್ಟಿದ್ದಾರೆ. ಇದರಿಂದ ನನಗೆ ಒಂದು ರೀತಿಯ ಶಕ್ತಿ ಬಂದಿದೆ. ದಿನೇ ದಿನೇ ಒಂದೊಂದು ಲೀಟರನ್ನು ಜಾಸ್ತಿ ಮಾಡುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆ.

ಶ್ರೀ ಮಳ್ಳೂರು ಆನಂದರಾಮ್ :—ನಾವು ಈಗ ೫ ಸೀಮೆ ಜಾಸ್ತಿ ಕೊಟ್ಟಿದ್ದಕ್ಕೆ ೫ ಲೀಟರ್ ಸೀಮೆಎಣ್ಣೆಯನ್ನು ಜಾಸ್ತಿ ಮಾಡಿದ್ದೀರಿ. ಇನ್ನು ೧೦ ನಿಮಿಷ ಜಾಸ್ತಿ ಸಮಯ ಕೊಡುತ್ತೇವೆ, ನಮಗೆ ಇನ್ನೂ ೧೦ ಲೀಟರ್ ಸೀಮೆಎಣ್ಣೆಯನ್ನು ಜಾಸ್ತಿಮಾಡಿ.

ಶ್ರೀ ಜಿ. ರಾಮೇಗೌಡ :—೧೦ ಲೀಟರ್ ಸೀಮೆಎಣ್ಣೆಯನ್ನು ಕೊಡುತ್ತಿದ್ದರು. ಆ ಬಸ್ ಪುನಃ ಬರುವುದನ್ನು ಎದುರು ನೋಡುತ್ತಿದ್ದೇನೆ. ನಮ್ಮಲ್ಲಿ ಸೀಮೆಎಣ್ಣೆಯ ಮೇಜರ್ ಡೀಲರ್ಸ್ ೬ ಜನ ಇದ್ದಾರೆ. ಮತ್ತು ಸೀಮೆಎಣ್ಣೆಯನ್ನು ಸೀಮೆಎಣ್ಣೆ ಆಯಿಲ್ ಕಂಪನಿಯಿಂದ ತಗೆದುಕೊಳ್ಳಲು ೧೦ ಜನ ಬಾಡಿಗೆಗೆ ಟ್ಯಾಂಕರ್‌ಗಳನ್ನು ಬಳಸುತ್ತಿದ್ದಾರೆ. ಕಳೆದ ೨ ದಿವಸಗಳಿಂದ ಈ ೧೦ ಜನಗಳು ತಮ್ಮ

ಅಲಾಟ್‌ಮೆಂಟನ್ನು ಲಿಫ್ಟ್ ಮಾಡಿಲ್ಲ. ಇವತ್ತು ಇದಕ್ಕೆ ಸಂಬಂಧಪಟ್ಟವರನ್ನು ಹಾಗೂ ಅಧಿಕಾರಿಗಳನ್ನು ಕರೆದು ಮಾತನಾಡಿದ್ದೇನೆ. ಇವತ್ತು ಸಂಜೆಯೊಳಗೆ ಅವರು ಲಿಫ್ಟ್ ಮಾಡದಿದ್ದರೆ ಲೈಸನ್ಸ್‌ನ್ನು ಕ್ಯಾನ್ಸಲ್ ಮಾಡುತ್ತೇನೆಂದು ಹೇಳಿದ್ದೇನೆ. ಅವರು ಲಿಫ್ಟ್ ಮಾಡುವ ಹಾಗೆ ಮಾಡುತ್ತೇನೆ. ನಮಗೆ ಇರತಕ್ಕಂಥ ತೊಂದರೆಗಳನ್ನು ದುರುಪಯೋಗ ಮಾಡಿಕೊಂಡು ಹಣ ಮಾಡತಕ್ಕಂಥಹ ಜನರೂ ಕೂಡ ಇದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಸ್ವಲ್ಪ ಕಾಲಾವಕಾಶಬೇಕು. ಸ್ವಲ್ಪ ಕಾಲವನ್ನು ಕೊಡಿ. ನಿನ್ನೆಗಿಂತ ಇವತ್ತು ಮೇಲು. ಇವತ್ತಿಗಿಂತ ನಾಳೆ ಮೇಲು. ನಾಳೆ ಸಂಜೆಯೊಳಗೆ ಏನು ಆಗಬಹುದೆಂಬುದನ್ನು ತಿಳಿದು ಇವತ್ತು ನಮ್ಮ ಗೆಳೆಯರು ೫–೬ ಜನ ಈ ವಿಷಯವನ್ನು ಇಲ್ಲಿ ತಂದಿದ್ದಾರೆ ಅವರಿಗೆ ಫೋನ್ ಮೂಲಕ ತಿಳಿಸುತ್ತೇನೆ. ಇದನ್ನು ಸರಿಮಾಡುತ್ತೇನೆ ಎನ್ನುವ ನಂಬಿಕೆ ನನಗಿದೆ. ಮತ್ತೆ ನೀವುಗಳು ಹೇಳಿದ ಸಲಹೆಗಳೆಲ್ಲವನ್ನೂ ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ. ಇದನ್ನು ಆದಷ್ಟು ಬೇಗ ಸುಧಾರಿಸುವುದಕ್ಕೆ ಸರ್ವ ಪ್ರಯತ್ನ ಮಾಡುತ್ತೇನೆ. ಇದಕ್ಕೆ ತಮ್ಮ ಸಹಕಾರವನ್ನು ಕೊಡಬೇಕು. ಇಷ್ಟನ್ನು ಹೇಳಿ ನನ್ನ ಮಾತುಗಳನ್ನು ಮುಂಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ :—ಶ್ರೀಮಾನ್ ರಾಮೇಗೌಡರು ಬಡಳ ಅನುಭವಿಗಳು ಹಾಗೂ ಪರಿಣತರು. ಅವರು ಪರದೇಶದಿಂದ ಈಗತಾನೆ ಬಂದಿದ್ದಾರೆ. ಅವರ ಮುಂಬಯಿಂದ ಬೆಂಗಳೂರಿಗೆ ವಿಮಾನದಲ್ಲಿ ಬರುವಾಗ ಕಾಫಿ ಕುಡಿಯುವಾಗ ಕಾಫಿಯಲ್ಲಿ ಸೀಮೆಎಣ್ಣೆಯ ವಾಸನೆ ಬಂತೆಂದು ಹೇಳಿದರು. ಇದರಲ್ಲಿ ಅವರಿಗೆ ಇರತಕ್ಕಂಥ ಶ್ರದ್ಧೆಯನ್ನು ತೋರುತ್ತದೆ. ಅವರು ಬೆಂಗಳೂರಿನಲ್ಲಿರುವ ನಾಗರಿಕರಿಗೆ ಸೀಮೆಎಣ್ಣೆಯನ್ನು ವಿತರಣೆ ಮಾಡುವ ಬಗ್ಗೆ ವಿವರವಾಗಿ ಹೇಳಿದ್ದಾರೆ; ಅದಕ್ಕೆ ನಾನು ಸಂತೋಷ ವ್ಯಕ್ತಮಾಡುತ್ತೇನೆ. ಆದರೆ ಶ್ರೀಮಾನ್ ಎಂ. ವಿ. ರಾಜಶೇಖರನ್ ಮತ್ತು ಶ್ರೀಮಾನ್ ಆರ್ಯಗೌರವರು ಹೇಳಿದ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳ ಬಗ್ಗೆ ಹಾಗೂ ಇತರೇ ನಗರಗಳ ಬಗ್ಗೆ ಏನು ವ್ಯವಸ್ಥೆ ಮಾಡಿದ್ದಾರೆನ್ನುವುದರ ಬಗ್ಗೆ ಒಂದು ಮಾತನ್ನು ಹೇಳಲಿಲ್ಲ. ಆದಕ್ಕಾಗಿ ನಾನು ಎದ್ದು ನಿಲ್ಲಬೇಕಾಗಿದೆ. ಇಡೀ ರಾಜ್ಯದಲ್ಲಿರತಕ್ಕಂಥ ಸಾಮಾನ್ಯ ಜಡವರ ಬಗ್ಗೆ ಸರ್ಕಾರ ಏನು ಯೋಚನೆ ಮಾಡಿದೆ? ಗ್ರಾಮಾಂತರ ಪ್ರದೇಶಗಳಲ್ಲಿರುವ ತೊಂದರೆಯನ್ನು ಹೇಳತೀರದು. ಗ್ರಾಮಾಂತರ ಪ್ರದೇಶದಲ್ಲಿರುವವರು ಸೀಮೆಎಣ್ಣೆಯನ್ನು ಅಡಿಗೆಯಲ್ಲಿ ಅಡಿಗೆ ಮಾಡುವುದಿಲ್ಲ. ಅವರು ಉಪಯೋಗಿಸುವ ದೀಪಕ್ಕೆ ಸೀಮೆಎಣ್ಣೆ ಬೇಕು. ಕೆಲವು ಹಳ್ಳಿಗಳಲ್ಲಿ ಸೀಮೆಎಣ್ಣೆ ಸಿಕ್ಕದಿರುವುದರಿಂದ ಸೂರ್ಯ ಅಸ್ತಮಯವಾದಾಗಲೇ ಮಲಗಿಬಿಡುತ್ತಾರೆ. ದುಡ್ಡು ಕೊಟ್ಟರೂ ಸೀಮೆಎಣ್ಣೆ ಸಿಕ್ಕುತ್ತಿಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಹಾಗೂ ಇತರೇ ನಗರಗಳಲ್ಲಿ ಸೀಮೆಎಣ್ಣೆಯನ್ನು ವಿತರಣೆ ಮಾಡುವ ಬಗ್ಗೆ ತಮ್ಮ ಇಲಾಖೆಯವರು ಏನು ವ್ಯವಸ್ಥೆ ಮಾಡಿದ್ದಾರೆಂಬುದನೂ ತಾವು ತಿಳಿಸಬೇಕು.

ಶ್ರೀ ಜಿ. ರಾಮೇಗೌಡ :—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಮಾತನ್ನು ನಾನು ಒಪ್ಪುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಸೀಮೆಎಣ್ಣೆಯನ್ನು ವಿತರಣೆ ಮಾಡುವ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ಪಹಿಸಿದ್ದೇವೆ. ಪ್ರತಿಯೊಂದು ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಫೋನ್ ಮೂಲಕ ಸಂಪರ್ಕ ಬೆಳೆಸಿ ಆಯಾ ಜಿಲ್ಲೆಯ ಪರಿಸ್ಥಿತಿಯ ಬಗ್ಗೆ ಏನು ವ್ಯವಸ್ಥೆ ನಡೆದಿದೆ ಎಂಬುದರ ಬಗ್ಗೆ ವಿವರಗಳನ್ನು ತಿಳಿದುಕೊಳ್ಳುವುದಕ್ಕೆ ನಮ್ಮ ಅಧಿಕಾರಿಗಳಿಗೆ ಈಗಾಗಲೇ ಹೇಳಿದ್ದೇನೆ. ಬೆಳಿಗ್ಗೆಯಿಂದ ಹೆಚ್ಚಿನ ಕಾರ್ಯಕ್ರಮ ಇದ್ದುದರಿಂದ ಆ ವಿಷಯವನ್ನು ನೋಡಲಿಕ್ಕಾಗಲಿಲ್ಲ. ಈಗ ಆ ಪರಿಸ್ಥಿತಿಯನ್ನು ನೋಡುತ್ತೇನೆ. ಏನಾದರೂ ವ್ಯತ್ಯಾಸ ಇದ್ದರೆ ಇವತ್ತು ಸಂಜೆಯೊಳಗೆ ಸರಿಪಡಿಸತಕ್ಕಂಥ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ. ಪ್ರತಿಯೊಂದು ಪೆಟ್ರೋಲ್ ಬಂಕ್‌ನವರು ಮಾಡಿರತಕ್ಕಂಥಾದ್ದನ್ನು ಹೇಳಿದರೆ ಅದು ರೇಡಿಯೋದಲ್ಲಿ ಹೋಗುತ್ತದೆ. ಈ ಒಂದು ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊಂಡಿರುವವರು ಯಾರ್ಯಾರು ಎಂಬುದನ್ನು ಕಂಡುಹಿಡಿದಿದ್ದೇನೆ. ಕಲಬೆರಕೆ ಮಾಡುತ್ತಿರುವವರ ಬಗ್ಗೆ ಪರೀಕ್ಷೆ ಮಾಡಿಸುತ್ತಿದ್ದೇನೆ. ಹಳ್ಳಿಗಳ ಬಗ್ಗೆಯೂ ಹೆಚ್ಚಿನ ಗಮನಕೊಡುತ್ತೇನೆ. ಈಗ ಇರತಕ್ಕಂಥ ಆವ್ಯವಸ್ಥೆಯನ್ನು ಪರಿಹಾರ ಮಾಡಲು ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಕೆ. ಎಚ್., ಹನುಮೇಗೌಡ :—ಬೆಂಗಳೂರು ನಗರದಲ್ಲಿ ನಾಳೆ ಸಂಜೆಯೊಳಗೆ ಪರಿಸ್ಥಿತಿಯಲ್ಲಿ, ಸುಧಾರಿಸುತ್ತೇನೆಂದು ಮಾನ್ಯ ಮಂತ್ರಿಯವರು ಹೇಳಿದರು. ಆದರೆ ಗ್ರಾಮಾಂತರ ಪ್ರದೇಶಗ ಜಿಲ್ಲಾ ಕೇಂದ್ರಗಳಲ್ಲಿ, ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಒಂದು ಲೀಟರ್ ಸೀಮೆಎಣ್ಣೆ ಸಿಕ್ಕುತ್ತಿಲ್ಲ; ಒಂದು ನೂರು ಲೀಟರ್ ಸೀಮೆಎಣ್ಣೆ ಇದ್ದರೆ ಅದಕ್ಕೆ ಸುಮಾರು ಒಂದು ಫರ್ಲಾಂಗ್ ಲೈನ್ ನಿಂತಿರು

ತ್ತಾರೆ. ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಒಂದೊಂದು ಕಾರ್ಡಿಗೆ ಎಷ್ಟೆಷ್ಟು ಸೀಮೆಎಣ್ಣೆಯನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೀರಾ ? ಕಾರ್ಡುಗಳನ್ನು ಕೆಲವು ತಾಲ್ಲೂಕು, ಹಾಗೂ ಗ್ರಾಮಗಳಲ್ಲಿ ಕೊಟ್ಟಿಲ್ಲ. ಅವರಿಗೆ ಯಾವ ರೀತಿಯಲ್ಲಿ ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀಮತಿ ರೇಣುಕ ರಾಜೇಂದ್ರನ್ :—ಗ್ರಾಮಾಂತರ ಪ್ರದೇಶಗಳಲ್ಲಿ ಪಾರದಲ್ಲಿ ಒಂದು ದಿವಸ ಸಂತೆ ಎಂಬುದಾಗಿ ಇರುತ್ತದೆ. ಹಿಂದೆ ಆ ಸಂತೆಯ ದಿವಸದಲ್ಲಿ ಸೀಮೆಎಣ್ಣೆಯನ್ನು ವಿತರಣೆ ಮಾಡುತ್ತಿದ್ದರು. ಈಗ ಅದನ್ನು ನಿಲ್ಲಿಸಿದ್ದಾರೆ. ಸಂತೆ ದಿವಸ ಸೀಮೆಎಣ್ಣೆಯನ್ನು ವಿತರಣೆ ಮಾಡುವ ವ್ಯವಸ್ಥೆಯನ್ನು ಮಾಡಬೇಕು.

ಶ್ರೀ ಜಿ. ರಾಮೇಗೌಡ :—ಸಂತೆ ದಿವಸಗಳಲ್ಲಿ ಸೀಮೆಎಣ್ಣೆಯನ್ನು ವಿತರಣೆ ಮಾಡುವ ಹಾಗೆ ಸಂಬಂಧಪಟ್ಟವರಿಗೆ ತಿಳಿಸುತ್ತೇನೆ. ಮತ್ತೆ ಶ್ರೀಮಾನ್ ಹನುಮೇಗೌಡರು ಹೇಳಿದ ರೀತಿಯಲ್ಲಿ ಕೆಲವು ಪಂಚಾಯಿತಿಗಳಿಗೆ ಮಾತ್ರ ಕಾರ್ಡುಗಳನ್ನು ಕೊಟ್ಟಿದೆ. ಕೆಲವು ಗ್ರಾಮ ಪಂಚಾಯಿತಿಗಳಿಗೆ ಕೊಟ್ಟಿಲ್ಲ. ಕೆಲವು ಪೇಟೆ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಡುಗಳನ್ನು ಕೊಟ್ಟಿದ್ದೇವೆ. ಕಾರ್ಡುಗಳ ಮೇಲೆ ಸೀಮೆಎಣ್ಣೆಯನ್ನು ವಿತರಣೆ ಮಾಡಿದರೆ ಆಗತಕ್ಕಂಥ ದುರುಪಯೋಗವನ್ನು ಸರಿಮಾಡಬಹುದು. ಮತ್ತು ವಿತರಣೆ ಮಾಡುವವನು ಸರಿಯಾದ ಲೆಕ್ಕವನ್ನು ಕೊಡಬೇಕೆಂಬುದಕ್ಕೋಸ್ಕರ ಕಾರ್ಡನ್ನು ಕೊಟ್ಟಿದ್ದೇವೆ. ಇನ್ನೂ ಕೆಲವು ಪಂಚಾಯಿತಿ ಹಾಗೂ ಗ್ರಾಮಗಳಿಗೆ ಕಾರ್ಡುಗಳನ್ನು ಕೊಡಲೇ ಬೇಕೆಂದೆನಿಸಿದರೆ ಕಾರ್ಡುಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತೇನೆ. ಕಾರ್ಡನ್ನು ಕೊಡಬೇಕಾಗಿಲ್ಲ, ಪರಿಸ್ಥಿತಿ ಸರಿಯಾಗಿದೆ ಎಂಬುದಾಗಿ ತಿಳಿದರೆ, ಕಾರ್ಡನ್ನು ಕೊಡುವ ವ್ಯವಸ್ಥೆಯನ್ನು ಕೈಬಿಡುತ್ತೇನೆ.

*(iii) re: Prevalence of cholera in some parts of Bangalore City.*

SRI T. R. SHAMANNA (Basavanagudi)—Sir I call the attention of the Minister for Health and Famity Welfare to the prevalence of cholera in some parts of Bangalore City.

SRI M. MALLAPPA (Minister for Health and Family Welfare) :—Sir, I make the following statement.—

Bangalore has a population of about 20 lakhs, with about 35 villages surrounding Bangalore, which have merged during 1964.

From January 1979 upto 20th March, 1979, 27 cases of cholera with one death are reported from the above area. These cases are from the following Corporation localities:

1. Benson Town
2. Vivekanagar
3. Frazer Town
4. Byrasandra
5. Tank Bund Road, Mavalli
6. Ulsoor
7. Yeshavanthpur
8. Veerapillai Street
9. Manavarthpet
10. Deepanjalinagar
11. Broadway